# ನಾದನೂಪುರ ವಂಡಾರು

# Nadanoopura Vandaru






ಮುಖ್ಯಸ್ಥರು – ವಂಡಾರು ಗೋವಿಂದ
97418 47278
ಪ್ರಧಾನ ಸಂಪಾದಕರು – ಶುಭಾಶಯ
ಗೌರವ ಸಂಪಾದಕರು – ಅಜಿತ್ ಕಾರಂತ್
94496 86807



**Nadanoopura Yakshothana Trust (NYT) (R.)**
**Vandaru, Marvi, Vandaru village and Post,**
**Brahmavara Taluk, Udupi District – 576223**
**Email : nadanoopuravandaru@gmail.com**
**Website – https://nyt.1ngo.in/**



ಪರಿವಿಡಿ

ಬೋರ್ಡ್ ರೂಮ್
ಸಂಪಾದಕೀಯ
ಕನ್ನಡ ಸಾಹಿತ್ಯಕ್ಕೆ ಯಕ್ಷಗಾನದ ಕೊಡುಗೆ
ಪ್ರಸಂಗದಲ್ಲಿ ಮೂಡಿ ಮರೆದ ಏಸು ಚರಿತ್ರೆ
ಕಾಮಿಡಿ ಜರ್ನಿ – ಕ್ಯಾದಗಿ ಟು ಬೆಂಗಳೂರು
ಪಳ್ಳಿ ಸೋಮನಾಥ ಹೆಗ್ಡೆ ಪ್ರಶಸ್ತಿ ಪುರಸ್ಕೃತ– ತೀರ್ಥಹಳ್ಳಿ ಗೋಪಾಲ ಆಚಾರ್ಯ
ಕನ್ನಡ ಸಾಹಿತ್ಯಕ್ಕೆ ಯಕ್ಷಗಾನದ ಕೊಡುಗೆ
ಧೀರ ಕಲೆಯೊಳಗೆ ಕೀರವಾಣಿಯರು – ಶ್ರೀಮತಿ ಮಾಲತಿ ವೆಂಕಟೇಶ್ ರಾವ್
ಕಾಡುವ ಪಾತ್ರ– 1 ಎಂಎ ನಾಯಕ್ ಮಂದಾರ್ತಿ
2. ಪೂಕಳ ಲಕ್ಷ್ಮಿ ನಾರಾಯಣ ಭಟ್
ನಮ್ಮ ಲೈಬ್ರರಿ – ಜೈಮಿನಿ ಭಾರತ ಆಧಾರಿತ ಯಕ್ಷಗಾನ ಪ್ರಸಂಗಗಳು
ಚಿನ್ನದ ಅಳಿಲು ಪ್ರಸಂಗ ಬಿಡುಗಡೆ
ಫಣಿಗಿರಿ ಪ್ರಶಸ್ತಿ ಪ್ರದಾನ ಸಮಾರಂಭ


## ಬೋರ್ಡ್ ರೂಂ



**ಗೋವಿಂದ ವಂಡಾರು**

ನವಂಬರ್ ತಿಂಗಳಿನಲ್ಲಿ ನಾದನೂಪುರ ಯಕ್ಷೋತ್ಥಾನ ಟ್ರಸ್ಟ್, ಸೋಶಿಯಲ್ ಇನ್ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಸೊಸೈಟಿ ಮಂಗಳೂರು ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಸಾಲಿಗ್ರಾಮದ ಸದಾನಂದ ರಂಗಮಂಟಪದಲ್ಲಿ ನಡೆದ ಚಿನ್ನದ ಅಳಿಲು ಯಕ್ಷಗಾನ ಪ್ರಸಂಗ ಪ್ರದರ್ಶನ ಯಶಸ್ವಿಯಾಗಿ ನಡೆಯಿತು. ಹೊಸ ಪ್ರಸಂಗವೊಂದು ಮೊದಲ ಪ್ರಯೋಗದಲ್ಲೇ ಅಚ್ಚುಕಟ್ಟಾಗಿ ಪ್ರದರ್ಶನ ಕಾಣಬೇಕಾದರೆ ಇದಕ್ಕೆ ಸಾಮೂಹಿಕ ಪ್ರಯತ್ನ ಬೇಕಾಗುತ್ತದೆ. ಪ್ರಸಂಗದಲ್ಲಿ ಬರುವ ಹೆಚ್ಚಿನ ಪಾತ್ರಗಳಿಗೆ ರಂಗದಲ್ಲಿ ಕೆಲಸ ಕಡಿಮೆಯೇ ಇದ್ದರೂ ಪ್ರತಿಯೊಬ್ಬರೂ ಅವರ ಪಾತ್ರಗಳನ್ನು ಶ್ರದ್ಧೆಯಿಂದ ಮಾಡಿದರೆ ಪ್ರಸಂಗದ ಸಂಪೂರ್ಣ ಪ್ರಸ್ತುತಿ ಸುಂದರವಾಗಿರುತ್ತದೆ ಎಂಬುದಕ್ಕೆ ಮೊನ್ನೆಯ ಪ್ರದರ್ಶನವೇ ಉದಾಹರಣೆ. ಸಣ್ಣ ಪಾತ್ರವಾದರೂ ಆ ಪಾತ್ರವನ್ನು ಮನಸ್ಪೂರ್ವಕವಾಗಿ ಮಾಡಬೇಕಾದ್ದು ಕಲಾವಿದನ ಕಲಾನಿಷ್ಠೆ. ಹಾಗಿಲ್ಲವಾದರೆ ಪ್ರಸಂಗ ಖಂಡಿತ ಗೆಲ್ಲಲು ಸಾಧ್ಯವಿಲ್ಲ. ಚಿನ್ನದ ಅಳಿಲು ಪ್ರಸಂಗದಲ್ಲಿ ಪ್ರತಿಭಾನ್ವಿತ ಕಲಾವಿದರಾದ ಹರೀಶ್ ಜಪ್ತಿಯವರಿಗೆ ಅಳಿಲು ಪಾತ್ರ ಎಂದು ನಿರ್ಧರಿಸಲಾಗಿತ್ತು. ಇದರ ಬಗ್ಗೆ ಅವರು ನನ್ನಲ್ಲಿ ವೈಯುಕ್ತಿಕವಾಗಿ 'ನನಗೆ ಅಳಿಲಿನ ಪಾತ್ರವೇ' ಎಂದು ಕೇಳಿ ಮುಖ ಮುದುಡಿಸಿಕೊಂಡಿದ್ದರು. ಆಗ ನಾನು 'ಹೆಸರು ಚಿಕ್ಕದಷ್ಟೆ, ಆ ಪಾತ್ರದ ಮಹತ್ವ ಏನು ಎಂಬುದು ಪ್ರದರ್ಶನ ಕಂಡ ಮೇಲೆ ನಿಮಗೆ ಗೊತ್ತಾಗುತ್ತದ' ಎಂದು ಹೇಳಿ ಒಪ್ಪಿಸಿದ್ದೆ. ನಂತರ ಆ ಪಾತ್ರಕ್ಕೆ ನಿರೀಕ್ಷೆಗೂ ಮೀರಿದ ಮೆಚ್ಚುಗೆ ವ್ಯಕ್ತವಾಗಿದ್ದು ನಿಜಕ್ಕೂ ಸಂತೋಷದಾಯಕ.. ಪ್ರಸಂಗ ಸಂಪೂರ್ಣ ಎಂದೆನಿಸಿಕೊಳ್ಳಬೇಕಾದರೆ, ಪದ್ಯದಲ್ಲೇ ಪೂರ್ತಿ ಕಥೆಯನ್ನು ಹೇಳಲಾಗುವುದಿಲ್ಲ, ಪದ್ಯ ಕಥೆಯ ಸ್ವಲ್ಪ ಭಾಗವನ್ನು ತಿಳಿಸಿದರೆ, ಉಳಿದ ಭಾಗವನ್ನು ಸಂಭಾಷಣೆಯಲ್ಲಿ ತುಂಬಿ ಕೊಡಬೇಕಾಗುತ್ತದೆ. ಆ ಮಟ್ಟಿಗೆ ಮೊನ್ನೆಯ ಪ್ರಸಂಗದಲ್ಲಿ ಭಾಗವಹಿಸಿದವರ ಪೌರಾಣಿಕ ಜ್ಞಾನ ಹಾಗೂ ಸನ್ನಿವೇಷಗಳನ್ನು ಪ್ರಸ್ತುತ ಪಡಿಸಿರುವ ರೀತಿ ಮೆಚ್ಚುವಂಥದ್ದು. ಪ್ರತೀ ಪಾತ್ರವೂ ಕಲಾವಿದ ಪ್ರಬುದ್ಧ ಪೋಷಣೆಯಿಂದ ಉತ್ತಮವಾಗಿ ಮೂಡಿ ಬಂತು. ಹಿರಿಯರಾದ ಎಂಕೆ ರಮೇಶ್ ಆಚಾರ್, ಪ್ರೊ. ಎಸ್ ವಿ ಉದಯ್ ಕುಮಾರ್ ಶೆಟ್ಟಿ, ಕೆಪಿ ಹೆಗಡೆ, ರಾಜಶೇಖರ್ ಹೆಬ್ಬಾರ್‌ರವರ ಮಾರ್ಗದರ್ಶನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯರ ನಿರ್ದೇಶಕಿ ಶ್ರೀಮತಿ ಪೂರ್ಣಿಮಾ, ಮಂಗಳೂರಿನ ಹರೀಶ್ ಅಮೈ ಮೊದಲಾದವರ ಸಹಕಾರ ಸ್ಮರಿಸಿಕೊಳ್ಳುವಂಥದ್ದು. ಇನ್ನು ನಮ್ಮ ಟಸ್ಟ್ ನ ಎಲ್ಲ ಕಾರ್ಯಕ್ರಮಗಳಲ್ಲಿ ಭಾಗವತರಾಗಿ ಭಾಗವಹಿಸುವ ಮೂಡುಬೆಳ್ಳೆ ಚಂದ್ರಕಾಂತ್ ರಾವ್ ಕಥೆಯ ಆಶಯವನ್ನು ಅರ್ಥೈಸಿಕೊಂಡು ರಂಗದಲ್ಲಿ ಪ್ರಸಂಗ ನಿರ್ದೇಶಿಸಬಲ್ಲ ಸಮರ್ಥರು. ಪ್ರತೀ ಪ್ರದರ್ಶನದಲ್ಲೂ ಅವರ ತೊಡಗಿಸಿಕೊಳ್ಳುವಿಕೆ ಹಾಗೂ ಪ್ರಸಂಗದ ಹಿಂದಿರುವ ಅವರ ಶ್ರಮವನ್ನು ಪರಿಗಣಿಸಿ ಟ್ರಸ್ಟ್ ವತಿಯಿಂದ ಕುಶಲ ರಂಗ ನಿದೇಶಕ ಎಂಬ ಅಭಿದಾನವನ್ನೂ ನೀಡಿ ಗೌರವಿಸಲಾಗಿದೆ. ಯಕ್ಷಗಾನ ಕಲೆಯಿಂದ ಅನೇಕ ಗೌರವ ಸನ್ಮಾನಗಳನ್ನು ನಾನು ಪಡೆದುಕೊಂಡಿದ್ದೇನೆ. ಜನರ ಪ್ರೀತಿ ಅಭಿಮಾನವನ್ನು ಪಡೆದುಕೊಂಡಿದ್ದೇನೆ. ಟ್ರಸ್ಟ್ ವತಿಯಿಂದ ಉತ್ತಮ ಕಲಾವಿದರನ್ನೂ ಗುರುತಿಸಬೇಕು ಎಂಬ ಹಂಬಲ ಈ ಮೂಲಕ ಈಡೇರುತ್ತಿದೆ. ನಾನು ಕಲಾವಿದನಾಗಿ ಇನ್ನೊಬ್ಬ ಕಲಾವಿದನಿಗೆ ಟ್ರಸ್ಟ್ ವತಿಯಿಂದ ನೀಡಲಾಗಿರುವ ಚೊಚ್ಚಲ ಗೌರವ ಇದು. ಮುಂದೆ ಇಂತಹ ಕಾರ್ಯಗಳು ದೊಡ್ಡ ಮಟ್ಟದಲ್ಲಿ ನಡೆಯಬೇಕೆಂಬ ಕನಸು ನನ್ನದು. ***ಈ ಪತ್ರಿಕೆಯ ವಿನ್ಯಾಸದ ಅಂತಿಮ ಹಂತದಲ್ಲಿ ಯಕ್ಷ ದಿಗ್ಗಜ ಕುಂಬ್ಳೆ ಸುಂದರ್ ರಾವ್ ರವರು ಸ್ವರ್ಗಸ್ಥರಾದ ಕಹಿ ವಾರ್ತೆ ಬಂದು ತಲುಪಿದೆ. ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರುತ್ತೇನೆ – ಗೋವಿಂದ ವಂಡಾರು.***


**ನಾದ ನೂಪುರ ಡಿಜಿಟಲ್ ಯಕ್ಷ ಪತ್ರಿಕಾ ಬಳಗ**

**ವಂಡಾರು ಗೋವಿಂದ I ಶುಭಾಶಯ I ಅಜಿತ್ ಕಾರಂತ್ I ಪ್ರೊ. ಉದಯ್ ಕುಮಾರ್ ಶೆಟ್ಟಿ I ರವಿ ಮಡೋಡಿ I ಎಂ ಶಾಂತಾರಾಮ್ ಕುಡ್ವ I ಸಾಯಿಸುಮ ಎಂ ನಾವಡ I ಉಮೇಶ್ ಶಿರೂರ್**

**ನ್ಯೂಸ್ ಲೆಟರ್ ವಿನ್ಯಾಸ – ಶುಭಾಶಯ**

**ಸಂಪಾದಕೀಯ**



**ಅಜಿತ್ ಕಾರಂತ್**
**ಗೌರವ ಸಂಪಾದಕರು**

***ಆತ್ಮೀಯ ಓದುಗರೆ,***

ಮತ್ತೊಮ್ಮೆ ಯಕ್ಷಗಾನ ಮೇಳಗಳು ದಿಗ್ವಿಜಯಕ್ಕೆ ಸಿದ್ಧವಾಗಿವೆ. ಈ ಸಂದರ್ಭದಲ್ಲಿ ಕಾಲಮಿತಿ ಯಕ್ಷಗಾನ ಎನ್ನುವ ಪದ ಎಲ್ಲೆಡೆ ಸಂಚಲನ ಮೂಡಿಸಿದೆ. ಕೆಲವು ಋಣಾತ್ಮಕ, ಕೆಲವು ಧನಾತ್ಮಕ ಚಿಂತನೆಗಳು ಹಿರಿಯ ಕಲಾವಿದರಿಂದ, ವಿಮರ್ಶಕರಿಂದ ಬರುತ್ತಲೇ ಇವೆ. ಇಷ್ಟರ ನಡುವೆ ಹೊಸ ಪ್ರಸಂಗಗಳೇ ಮೇಳದ ಅನ್ನವೆನ್ನುವ ವಾಕ್ಯವೊಂದು ಅನೇಕ ಕಲಾಪ್ರೇಮಿಗಳ ಬೇಸರಕ್ಕೆ ಕಾರಣವಾದುದಂತೂ ಸತ್ಯ! ಟೆಂಟ್ ಮೇಳಗಳ (ಈಗಿರುವ ಎರಡು ಮೇಳಗಳ) ಪ್ರದರ್ಶನದ ವೀಡಿಯೋ ಮಾಡುವಂತಿಲ್ಲ, ಫೋಟೋ ತೆಗೆದ ಕಾರಣಕ್ಕೆ ತಗಾದೆ ತೆಗೆದದ್ದು ಇತ್ಯಾದಿ....

ಹೊಸಪ್ರಸಂಗಗಳು ಅನ್ನವೆನ್ನುವುದಾದರೆ, ಹಳೇಪ್ರಸಂಗಗಳು ಏನು? ಮೂಲವನ್ನೇ ಮರೆತ ಕಲೆ ಬೆಳವಣಿಗೆ ಕಂಡೀತೇ? ಕೆಲವು ತುಣುಕುಗಳನ್ನು ನೋಡಿದಾಕ್ಷಣ ಇಡೀ ಕಥಾನಕ ಗೊತ್ತಾಗುವಂತಿದ್ದರೆ, ಆ ಪ್ರಸಂಗದ ಮೌಲ್ಯವೇನು? ಹಾಗಾದರೆ ನಮ್ಮಲ್ಲಿ ಸರಕುಗಳೇ ಇಲ್ಲ ಎನ್ನುವುದನ್ನು ಹೀಗೆ ಒಪ್ಪಿಕೊಳ್ಳುತ್ತಿದ್ದಾರೆಯೇ? ಎಲ್ಲಿಯೋ ಒಂದು ಕಡೆ ಹಳಿತಪ್ಪಿದ ಸೂಚನೆ ಕಾಣುಸುತ್ತಿದೆಯಲ್ಲವೇ?

ಇಷ್ಟರ ಜೊತೆಯಲ್ಲಿಯೇ ಕೆಲವು ಮೇಳಗಳ ಪ್ರದರ್ಶನ ಲೈವ್ ಆಗಿ ದೊರಕುತ್ತಿರುವುದೂ ಒಂದು ಬೆಳವಣಿಗೆ! ಕೆಲವು ನೂತನ ಪೌರಾಣಿಕ ಆಖ್ಯಾನಗಳು ರಂಗವೇರಿ ವಿಜೃಂಭಿಸುತ್ತಿರುವುದೂ ಸ್ವಾಗತಾರ್ಹ.


ಇದೆಲ್ಲದರ ನಡುವೆ ಕಾರ್ಯಕ್ರಮದ ಆಯೋಜಕರ ಗಮನಕ್ಕೆ ಒಂದು ವಿಷಯ; ತಾವುಗಳು ವೃತ್ತಿನಿರತ ಕಲಾವಿದರನ್ನು ವಿಶೇಷ ಕಾರ್ಯಕ್ರಮಗಳಿಗಾಗಿ ಆಮಂತ್ರಿಸಿರುತ್ತೀರಿ. ಆದರೆ ಸಮಯಪಾಲನೆ ಬಹಳ ತೊಡಕಾಗುತ್ತಿದೆ. ಹೇಳಿದ ಸಮಯಕ್ಕೆ ಪ್ರಾರಂಭವಾಗದಿರುವುದೂ, ಪ್ರಾರಂಭದ ಹಂತ ಅತೀ ನಿಧಾನ ಗತಿಯಲ್ಲಿ ಸಾಗುತ್ತಾ, ಗಾನಗೋಷ್ಠಿ, ವಿದ್ವತ್ಪದರ್ಶನಗಳ ನಡುವೆ ಕಥಾನಕ ಕೊನೆಮುಟ್ಟದೇ, ನೀವು ಕರೆಸಿದ ಮೇಳದ ಕಲಾವಿದರು ಅವರ ಸಮಯಕ್ಕೆ ಮೇಳಕ್ಕೆ ಹೋಗಲೇ ಬೇಕಾದ್ದರಿಂದ ಪ್ರಸಂಗದ ಮುಖ್ಯಭಾಗಕ್ಕೆ ಅವಕಾಶವೇ ಇಲ್ಲದಂತೆ ಪ್ರಸಂಗ ಮುಗಿಸುವುದು ಸಾಮಾನ್ಯವಾಗಿದೆ. ಹೀಗಾಗದಂತೆ ತಡೆಯಬಹುದಾದ ಹೊಣೆ ನಿಮಗಿದೆ.ಆಲೋಚಿಸಿ...

ವಂದನೆಗಳೊಂದಿಗೆ, ***ಅಜಿತ ಕಾರಂತ ಟಿ.ವಿ.***

# ಪ್ರಸಂಗದಲ್ಲಿ ಮೂಡಿ ಮೆರೆದ ಏಸು ಚರಿತ್ರೆ

ಡಿಸೆಂಬರ್ ತಿಂಗಳೆಂದರೆ ಪ್ರಪಂಚವೆಲ್ಲ ಯೇಸು ಕ್ರಿಸ್ತನ ಜನ್ಮವನ್ನು ಸಂಭ್ರಮದಿಂದ ಆಚರಿಸುವಂಥ ತಿಂಗಳು. ಡಿಸೆಂಬರ್ ತಿಂಗಳ ಕೊನೆಯ ಹತ್ತು ದಿನಗಳು ಕ್ರಿಸ್ ಮಸ್ ರಜೆಯೆಂದು ಪ್ರಪಂಚದ ಹೆಚ್ಚಿನ ಭಾಗಗಳಲ್ಲಿ ನೀಡಲಾಗುತ್ತದೆ. ವಿಶ್ವಾದ್ಯಂತ ಜಾತಿ ಭೇದವಿಲ್ಲದೆ ಯೇಸು ಕ್ರಿಸ್ತನ ಜನನವನ್ನು ಸಂಭ್ರಮದಿಂದ ಜನ ಆಚರಿಸ್ತಾರೆ. ಇಸ್ರೇಲ್‌ನ ಬೆಥ್ಲೆಹೆಮ್‌ನಲ್ಲಿ ಜನಿಸಿ, ಕ್ರೈಸ್ತ ಸಾಂಪ್ರದಾಯಿಕತೆಗಳನ್ನು ವಿರೋಧಿಸಿ ಮಾನವತೆಯನ್ನು ಸಾರಿ ಅಮರನಾದ ಶಾಂತಿಯ ಸಂದೇಶವನ್ನು ಬಿತ್ತರಿಸಿದ, ವಿಶ್ವದ ಒಂದು ಬೃಹತ್ ವರ್ಗದ ದೇವನಾಗಿ ಮೆರೆದ ಮಹಾಚೇತನ ಯೇಸು ಕ್ರಿಸ್ತ. ಐತಿಹಾಸಿಕ ಪುರುಷನಾಗಿರುವ ಈತನ ಜೀವನ ಚರಿತ್ರೆ ಪ್ರಪಂಚಕ್ಕೆ ಸ್ಫೂರ್ತಿದಾಯಕ. ಯೇಸುವಿನ ಮೌಲ್ಯಯುತ ಜೀವನವನ್ನು ಯಕ್ಷಗಾನವೆಂಬ ಸತ್ವ ಕಲೆಯ ಮೂಲಕ ಕಟ್ಟಿಕೊಡುವ ಪ್ರಯತ್ನ ನಡೆದಿದ್ದು ಅದರಲ್ಲಿ ಯಶಸ್ವಿಯಾಗಿದ್ದಾರೆ ಅಂದಿನ ಮೇಳ ಪ್ರಸಂಗಕರ್ತರು ಮತ್ತು ಕಲಾವಿದರು. ಜಾತಿ ಧರ್ಮವನ್ನು ಮೀರಿದ ಕಲೆ ಯಕ್ಷಗಾನ ಎಂಬುದನ್ನು ನಿರೂಪಿಸುವಲ್ಲಿ ಇದು ಮಾದರಿಯಾಗಿದ್ದು, ಯಕ್ಷಗಾನದೆಡೆ ಒಂದು ದೊಡ್ಡ ಸಂಖ್ಯೆಯ ವರ್ಗವನ್ನು ಕಲೆಯೆಡೆಗೆ ಸೆಳೆಯುವಲ್ಲಿ ದೊಡ್ಡ ಮಟ್ಟದ ಯಶಸ್ಸು ಸಾಧಿಸಿದೆ. ಮಧ್ಯಂತರದಲ್ಲಿ ಒಂದಷ್ಟು ವಾದ ವಿವಾದಗಳು ಹೆಡೆಯೆತ್ತಿದ್ದರೂ ಯೇಸು ಕ್ರಿಸ್ತ ಮಹಾತ್ಮೆ ಎಂಬ ಯಕ್ಷಗಾನ ಕಥಾನಕವಾಗಿ ಮೂಡಿ ಬಂದದು ಚಾರಿತ್ರಿಕವೇ ಸರಿ. ಈ ಹಿನ್ನಲೆಯಲ್ಲಿ ಡಿಸೆಂಬರ್ ತಿಂಗಳ ವಿಶೇಷವಾಗಿ ಯೇಸು ಕ್ರಿಸ್ತ ಮಹಾತ್ಮೆ ಪ್ರಸಂಗದ ಕುರಿತು ಈ ಲೇಖನ ಮೂಡಿ ಬಂದಿದೆ.

ಯಕ್ಷಗಾನದಲ್ಲಿ ಸಾಮಾನ್ಯವಾಗಿ ರಾಮಾಯಣ, ಮಹಾಭಾರತ




ಪುರಾಣಗಳ ಕಥೆಯೇ ಪ್ರಸಂಗ ರೂಪದಲ್ಲಿ ಪ್ರದರ್ಶಿಸುವುದು ವಾಡಿಕೆ. ಶ್ರೀರಾಮ. ಶ್ರೀಕೃಷ್ಣ ಭೀಷ್ಮ, ನಳ, ಹರಿಶ್ಚಂದ್ರ, ಪರಶುರಾಮ ಮುಂತಾದ ಪೌರಾಣಿಕ ಪಾತ್ರಗಳೇ ಯಕ್ಷಗಾನದಲ್ಲಿ ನಾಯಕ ಪಾತ್ರಗಳು. ಆದರೆ, ಇದಕ್ಕೆ ವ್ಯತಿರಿಕ್ತ ಎಂಬಂತೆ ಚಾರಿತ್ರಿಕ, ಐತಿಹಾಸಿಕ, ಕಾಲ್ಪನಿಕ ಕಥೆಗಳೂ ಯಕ್ಷಗಾನ ರಂಗದಲ್ಲಿ ಪ್ರದರ್ಶಿತಗೊಂಡಿದೆ. ಹಾಗೆಯೇ ಏಸುಕ್ರಿಸ್ತನ ಕುರಿತಾದ ಕಥೆಯೂ ಯಕ್ಷಗಾನದಲ್ಲಿ ಪ್ರಸಂಗವಾಗಿ ಪ್ರಸ್ತುತಗೊಂಡಿದೆ. ೧೯೭೬ ರಲ್ಲಿ ಮುಳಿಯ ಕೇಶವಯ್ಯರು ರಚಿಸಿದ "ಮಹಾಚೇತನ ಏಸುಕ್ರಿಸ್ತ ಮಹಾತ್ಮೆ" ಪ್ರಸಂಗವು ಅರ್ಥಸಹಿತವಾಗಿ ಮುದ್ರಣಗೊಂಡು, ೨೦೧೭ ರಲ್ಲಿ ಮಂಗಳೂರಿನ ಡಾನ್ ಬೋಸ್ಕೋ ಹಾಲ್ ನಲ್ಲಿ ಲೋಕಾರ್ಪಣೆ ಮಾಡುವ ಸಂದರ್ಭದಲ್ಲಿ, ಈ ಪ್ರಸಂಗದ ತಾಳಮದ್ದಳೆ ಪ್ರದರ್ಶನಕ್ಕೆ ವ್ಯಾಪಕ ಪರ–ವಿರೋಧಗಳೂ ಬಂದಿದ್ದವು.

ಏಸುಕ್ರಿಸ್ತನ ಕಥೆಯು ಯಕ್ಷಗಾನದಲ್ಲಿ ಪ್ರಸ್ತುತವಾದುದು ಇತ್ತೀಚಿನ ಸಂಗತಿಯಲ್ಲ. ಸುಮಾರು ೧೯೭೨ರಲ್ಲಿ ಅಂದಿನ ಸುಪ್ರಸಿದ್ಧ ಭಾಗವತರಾದ ದಿ. ಅಗರಿ ಶ್ರೀನಿವಾಸ ಭಾಗವತರು "ಭಗವಾನ್ ಏಸುಕ್ರಿಸ್ತ ಮಹಾತ್ಮೆ" ಎಂಬ ಪ್ರಸಂಗವನ್ನು

ಪ್ರಥಮವಾಗಿ ರಚಿಸಿದ್ದರು. ಆ ಕಾಲದಲ್ಲಿ ಈ ಪ್ರಸಂಗವು ತುಂಬಾ ಕಡೆ ಪ್ರದರ್ಶನಗೊಂಡಿತ್ತು. ನಾನು ಸಣ್ಣವನಿರುವಾಗಲೇ ಅಗರಿಯವರ ಈ ಪ್ರಸಂಗ ನೋಡಿದ ನೆನಪು ನನಗಿದೆ . ಬಜ್ಪೆಯ ಸೈಂಟ್ ಜೋಸೆಫ್ ಹೈಸ್ಕೂಲಿನಲ್ಲಿ ಈ ಪ್ರಸಂಗ ನಾನು ನೋಡಿದ್ದೆ. ಅಂದು ಸುಪ್ರಸಿದ್ಧ ಯಕ್ಷಗಾನ ಕಲಾವಿದರಾಗಿದ್ದ ದಿ.ಮಲ್ಪೆ ಶಂಕರನಾರಾಯಣ ಸಾಮಗರೇ ಏಸುಕ್ರಿಸ್ತನ ಪಾತ್ರ ಮಾಡಿದ್ದರು. ಇನ್ನುಳಿದ ಪಾತ್ರಗಳಲ್ಲಿ ಇನ್ನಿತರ ಪ್ರಸಿದ್ಧ ಕಲಾವಿದರಿದ್ದರು. ಆ ಕಾಲದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚಿನ ಎಲ್ಲಾ ಕ್ರಿಶ್ಚಿಯನ್ ಆಡಳಿತದ ಶಾಲೆಗಳಲ್ಲಿ ಈ ಪ್ರಸಂಗ ಪ್ರದರ್ಶನಗೊಂಡಿತ್ತು. ಅಂದರೆ ಕ್ರಿಶ್ಚಿಯನ್ ಬಾಂಧವರು ತುಂಬು ಹೃದಯದಿಂದ ಈ ಪ್ರಸಂಗವನ್ನು ಅಂದಿನ ಕಾಲದಲ್ಲಿ ಸ್ವೀಕರಿಸಿದ್ದರು. ನಂತರ ಈ ಪ್ರಸಂಗವು ಬೇಡಿಕೆ ಇಲ್ಲದೇ ನೇಪಥ್ಯಕ್ಕೆ ಸರಿಯಿತು.



ನಂತರದಲ್ಲಿ, ೧೯೭೬ ರಲ್ಲಿ ಮುಳಿಯ ಕೇಶವಯ್ಯನವರು ಇದೇ ಕಥೆಯನ್ನು ಬೈಬಲನ್ನು  ಆಧಾರವಾಗಿರಿಸಿ "ಮಹಾ ಚೇತನ ಏಸುಕ್ರಿಸ್ತ ಮಹಾತ್ಮೆ" ಎಂಬ ಶೀರ್ಷಿಕೆಯಲ್ಲಿ  ಇನ್ನೊಂದು ಪ್ರಸಂಗ ರಚಿಸಿದರು. ಇದನ್ನೇ ೨೦೧೭ರಲ್ಲಿ ಅರ್ಥಸಹಿತ ಪುಸ್ತಕ ಮಾಡಿ ಬಿಡುಗಡೆ ಮಾಡಿದ್ದರು. ಸುರತ್ಕಲ್ ಮೇಳದ ಸುಪ್ರಸಿದ್ಧ ಕಲಾವಿದರಾಗಿದ್ದ ದಿ.ಬಾಬು ಕುಡ್ತಡ್ಕರ ಒತ್ತಾಯದಿಂದ ಈ ಪ್ರಸಂಗವನ್ನು ಮುಳಿಯರು ರಚಿಸಿದ್ದರು. ಈ ಪ್ರಸಂಗವು ನೂರಾರು ಪ್ರದರ್ಶನ ಕಂಡಿತು. ಮಾತ್ರವಲ್ಲ, ಈ ಪ್ರಸಂಗವು ಇಂಗ್ಲಿಷ್ ಹಾಗೂ ಜರ್ಮನ್ ಭಾಷೆಗಳಿಗೆ ತರ್ಜುಮೆಗೊಂಡು, ಪ್ರದರ್ಶನವನ್ನೂ ಕಂಡಿತ್ತು. ದಕ್ಷಿಣ ಕನ್ನಡ ಜಿಲ್ಲೆಯ ಬಿಷಪ್ ರವರು ಈ ಪ್ರಸಂಗದ ಪ್ರದರ್ಶನಕ್ಕೆ ತುಂಬಾ ಪ್ರೋತ್ಸಾಹ ನೀಡಿದ್ದರು. ಕ್ರೈಸ್ತರ ಮೂಲವಾದ ವ್ಯಾಟಿಕನ್ ನಿಂದ ಕ್ರೈಸ್ತರ ಪರಮ ಗುರುಗಳಾದ ಪೋಪರೇ ಮುಳಿಯರನ್ನು, ಈ ಪ್ರಸಂಗದ ರಚನೆಗಾಗಿ ವಿಶೇಷ ಪ್ರಶಸ್ತಿ ನೀಡಿ, ಶ್ಲಾಘಿಸಿ ಅಭಿನಂದಿಸಿದ್ದರು. ಪಾಶ್ಚಾತ್ಯ ಜಾನಪದ ತಜ್ಞ ಜೋಕಿಮ್ ವಿಯಟ್ಸೇ ಎಂಬವರು ವಿದುಷಿ ಡಾ. ಗೀತಾ ಮುಲಿಯಾಲ್ ರಿಂದ ಈ ಪ್ರಸಂಗವನ್ನು ಇಂಗ್ಲಿಷ್ ಭಾಷೆಗೆ ಭಾಷಾಂತರಿಸಿದ್ದರು. ಅಂದಿನ ಕಾಲದಲ್ಲಿ ಶೀನಪ್ಪ ಭಂಡಾರಿಯವರ ಸುಬ್ರಹ್ಮಣ್ಯ ಟೆಂಟ್ ಮೇಳದಲ್ಲಿ, ಪ್ರಾರಂಭದಲ್ಲಿ ಈ ಪ್ರಸಂಗ ನಂತರದ ಎರಡನೇ ಪ್ರಸಂಗವಾಗಿ ಪೌರಾಣಿಕ ಪ್ರಸಂಗ ಪ್ರದರ್ಶನಗೊಳ್ಳುತ್ತಿತ್ತು. ನಂತರದಲ್ಲಿ ಈ ಪ್ರಸಂಗವೂ ನೇಪಥ್ಯಕ್ಕೆ ಸರಿಯಿತು. ೨೦೧೭ ರಲ್ಲಿ ಮುಳಿಯ ಕೇಶವಯ್ಯರ ಸುಪುತ್ರ ಮುಳಿಯ ರಘುರವರು, ಈ ಪ್ರಸಂಗದ ಅರ್ಥಸಹಿತ ಪುಸ್ತಕ ಬಿಡುಗಡೆ ಮಾಡಿದರು. ಅಂದಿನ ಕಾಲದಲ್ಲಿ ಶೀನಪ್ಪ ಭಂಡಾರಿಯವರ ಸುಬ್ರಹ್ಮಣ್ಯ ಟೆಂಟ್ ಮೇಳದಲ್ಲಿ, ಪ್ರಾರಂಭದಲ್ಲಿ ಈ ಪ್ರಸಂಗ ನಂತರದ ಎರಡನೇ ಪ್ರಸಂಗವಾಗಿ ಪೌರಾಣಿಕ ಪ್ರಸಂಗ ಪ್ರದರ್ಶನಗೊಳ್ಳುತ್ತಿತ್ತು. ನಂತರದಲ್ಲಿ ಈ ಪ್ರಸಂಗವೂ ನೇಪಥ್ಯಕ್ಕೆ ಸರಿಯಿತು. 2017ರಲ್ಲಿ ಮುಳಿಯ ಕೇಶವಯ್ಯರ ಸುಪುತ್ರ ಮುಳಿಯ ರಘುರವರು, ಈ ಪ್ರಸಂಗದ ಅರ್ಥಸಹಿತ ಪುಸ್ತಕ ಬಿಡುಗಡೆ ಮಾಡಿದರು. ಶ್ರೀನಿವಾಸ ಸಾಸ್ತಾನರು ೨೦೦೩ ರಲ್ಲಿ ಏಸುಕ್ರಿಸ್ತನ ಕುರಿತಾದ ಯಕ್ಷಗಾನ ಪ್ರಸಂಗ ಪ್ರದರ್ಶಿಸಿದ್ದರು. ೨೦೦೫ ರಲ್ಲಿ ಸಾಲಿಗ್ರಾಮದ ಮಾರುತಿ ಯುವಕ ಮಂಡಲದವರು ಬೆಂಗಳೂರಿನಲ್ಲಿ "ಕ್ರಿಸ್ತ ಕಾರುಣ್ಯ" ಎಂಬ ಶೀರ್ಷಿಕೆಯಲ್ಲಿ ಏಸುಕ್ರಿಸ್ತನ ಕುರಿತಾದ ಯಕ್ಷಗಾನ ಪ್ರದರ್ಶನ  ಪ್ರಸ್ತುತಪಡಿಸಿದ್ದರು. ಅಂಬಾತನಯ ಮುದ್ರಾಡಿಯವರೂ ಏಸುಕ್ರಿಸ್ತನ ಕುರಿತಾದ ಪ್ರಸಂಗ ರಚಿಸಿದ್ದರು ಎಂಬ ಉಲ್ಲೇಖವಿದೆ.

2020ರಲ್ಲಿ ಕಾರ್ಕಳ ಸಮೀಪದ ಅತ್ತೂರು ಚರ್ಚ್ ನಲ್ಲಿ "ಕ್ರಿಸ್ತ ಕಾರುಣ್ಯ" ಯಕ್ಷಗಾನ ಗೊಂಬೆಯಾಟವೂ ಜರುಗಿತ್ತು.  ಯಕ್ಷಗಾನದ ಇನ್ನೊಂದು ಪ್ರಭೇದವಾದ ಮೂಡಲಪಾಯ ಯಕ್ಷಗಾನದಲ್ಲೂ ಏಸುಕ್ರಿಸ್ತನ ಕಥೆ ಪ್ರಸಂಗವಾಗಿ ಪ್ರದರ್ಶನಗೊಂಡಿದೆ. ೧೯೮೬ ರಲ್ಲಿ ಮೂಡಲಪಾಯ ಯಕ್ಷಗಾನ ಪ್ರಸಂಗಕರ್ತರಾದ ಎಚ್. ಎಸ್. ಸುಬ್ಬರಾಯಪ್ಪರವರು "ಏಸು ಸ್ವಾಮಿಯ ಕಥೆ" ಎಂಬ ಶೀರ್ಷಿಕೆಯಲ್ಲಿ ಈ ಪ್ರಸಂಗ ರಚಿಸಿ ಪ್ರದರ್ಶಿಸಿದ್ದರು. ಸುಬ್ಬರಾಯಪ್ಪರು ಈ ಪ್ರಸಂಗಕ್ಕೆ ಬೈಬಲ್ ನ ಹೊಸ ಒಡಂಬಡಿಕೆಯನ್ನು ಆಧಾರವಾಗಿಸಿ, ಸ್ವಂತ ಕಲ್ಪನೆಯನ್ನೂ ಸೇರಿಸಿ ಈ ಪ್ರಸಂಗ ರಚಿಸಿ ಪ್ರದರ್ಶಿಸಿದ್ದರು. ಬಡಗು ತಿಟ್ಟಿನ ಯಕ್ಷಗಾನದಲ್ಲೂ ಏಸುಕ್ರಿಸ್ತನ ಮಹಾತ್ಮೆ ಸಾರುವ ಪ್ರಸಂಗ ಪ್ರದರ್ಶಿತಗೊಂಡಿದೆ. ಸುಪ್ರಸಿದ್ಧ ಕಲಾವಿದರಾದ ದಿ. ಚಿಟ್ಟಾಣಿ ರಾಮಚಂದ್ರ ಹೆಗಡೆಯವರು ಸೈತಾನನ ಪಾತ್ರ ಮಾಡಿದ್ದರು. ಅಂದಿನ ಅವರ ಸೈತಾನನ ಪಾತ್ರ ನೋಡಿದ್ದ ಆ ಪರಿಸರದ ಪಾದ್ರಿಗಳು "ಸೈತಾನ ಅಂದರೆ ಇಷ್ಟು ಭೀಕರ ಹಾಗೂ ದುಷ್ಟನೇ?" ಎಂದು ಉದ್ಗರಿಸಿದ್ದರು. ಈ ಎಲ್ಲಾ ಪ್ರಸಂಗಗಳಲ್ಲಿ ಸಾಹಿತ್ಯ, ಪದ್ಯ ರಚನೆಯಲ್ಲಿ ಛಂದಸ್ಸಿನ ಸಮರ್ಪಕ ಬಳಕೆ, ಪ್ರಾರಂಭದಲ್ಲಿ ಗಣಪತಿ ಸ್ತುತಿ, ದೇವತೆಗಳ ಒಡ್ಡೋಲಗ, ನಾಂದಿ ಪದ್ಯ, ಮಂಗಲ ಪದ್ಯ–ಭಾಗವತಿಕೆ, ಚೆಂಡೆ–ಮದ್ದಲೆಯ ಅಳವಡಿಕೆ ಎಲ್ಲದರಲ್ಲೂ ಯಕ್ಷಗಾನದ ಮೂಲಸ್ವರೂಪವಿತ್ತು. ಹಾಗಾಗಿ, ಏಸುಕ್ರಿಸ್ತನ ಕುರಿತಾದ ಯಕ್ಷಗಾನ ಪ್ರಸಂಗಗಳು ಪ್ರಾರಂಭದಲ್ಲಿ ಉತ್ತಮ ಪ್ರತಿಕ್ರಿಯೆ ಹೊಂದಿದರೂ, ಅಷ್ಟೇ ವೇಗವಾಗಿ ನೇಪಥ್ಯಕ್ಕೆ ಸರಿಯಿತು. ಇದಕ್ಕೆ ಮುಖ್ಯ ಕಾರಣವೆಂದರೆ, ಈ ಪ್ರಸಂಗವು ಯಕ್ಷಗಾನೀಯ ಶೈಲಿಗೆ ಹೊಂದದಿರುವುದೇ ಆಗಿತ್ತು. ಯಾವುದೇ ಕಥಾನಕಗಳು ಯಕ್ಷಗಾನಕ್ಕೆ ಬಂದಾಗ, ಯಕ್ಷಗಾನದ ಮೂಲ ಸತ್ವವಿರಲೇಬೇಕು. ಹಾಗಾಗಿ ಯಕ್ಷಗಾನೀಯ ಶೈಲಿಗೆ ಹೊಂದದಿದ್ದರೆ, ಪ್ರಸಂಗವು ದೀರ್ಘ ಕಾಲ ಪ್ರೇಕ್ಷಕರನ್ನು ಹಿಡಿದಿಟ್ಟುಕೊಳ್ಳಲು ವಿಫಲವಾಗುತ್ತದೆ.





ಎಂ.ಶಾಂತರಾಮ ಕುಡ್ವ

ಈ ಪ್ರಸಂಗದ ಮುಖ್ಯ ಪಾತ್ರ ಏಸುಕ್ರಿಸ್ತ. ಆದರೆ, ಪಾಶ್ಚಾತ್ಯ ಮೂಲದ ಏಸುಕ್ರಿಸ್ತನ ಪಾತ್ರ ಹಾಗೂ ಉಳಿದ ಇನ್ನಿತರ ಪಾತ್ರಗಳನ್ನು ಯಕ್ಷಗಾನೀಯ ಶೈಲಿಯ ವೇಷಭೂಷಣದಲ್ಲಿ ತರುವುದು ತುಂಬಾ ಕಷ್ಟ ಹಾಗೂ ಅಸಮಂಜಸ ಕೂಡಾ ಹೌದು. ಪಾಶ್ಚಾತ್ಯರ ಉಡುಪುಗಳೇ ಬೇರೆ. ಯಕ್ಷಗಾನದ ಪೋಷಾಕುಗಳೇ ಬೇರೆ. ಏಸುಕ್ರಿಸ್ತನು ಜನಿಸಿದ್ದು ಬಡ ಕುರಿ, ದನಗಾಹಿ ಜನಾಂಗದಲ್ಲಿ. ಅದನ್ನು ಯಕ್ಷಗಾನದಲ್ಲಿ ಹೇಗೆ ತೋರಿಸುವುದು? ಪಗಡಿ ಅಥವಾ ಕೋಲು ಕಿರೀಟಧಾರಿಯಾಗಿ ತೋರಿಸಲಾದೀತೇ? ಉಳಿದ ಪಾತ್ರಗಳಿಗೂ ಇದೇ ಸಮಸ್ಯೆ. ಮೆಸ್ಸಾಯ, ಪಿಲಾತ, ಜುದಾಸ, ಮತ್ತಾಯ ಮುಂತಾದ ಪಾತ್ರಗಳನ್ನೂ ಯಕ್ಷಗಾನೀಯ ಚೌಕಟ್ಟಿಗೆ ತರುವುದು ಕಷ್ಟ. ಹೀಗಾಗಿ ಈ ಪ್ರಸಂಗವು, ಉಳಿದ ಪೌರಾಣಿಕ ಪ್ರಸಂಗಗಳಂತೆ ಸ್ಥಾಯಿಯಾಗಿ ಉಳಿಯಲು ವಿಫಲವಾಯಿತು. ಏಸುಕ್ರಿಸ್ತನ ಕುರಿತಾದ ಯಕ್ಷಗಾನ ಪ್ರಸಂಗದ ಪ್ರದರ್ಶನ ಕುಂಠಿತವಾಗಲು ಇನ್ನೊಂದು ಮುಖ್ಯ ಕಾರಣವೂ ಇದೆ. ಕ್ರೈಸ್ತರ ದೇವದೂತನಾದ ಏಸುಕ್ರಿಸ್ತನ ಕಥೆಯುಳ್ಳ ಈ ಪ್ರಸಂಗದ ಪ್ರದರ್ಶನಕ್ಕೆ ಕ್ರೈಸ್ತರೇ ಪ್ರೋತ್ಸಾಹ ನೀಡಲಿಲ್ಲ ಎನ್ನಬಹುದು. ಪ್ರಾರಂಭದಲ್ಲಿ ತುಸು ಮಟ್ಟಿನ ಪ್ರೋತ್ಸಾಹ ನೀಡಿದರೂ, ಮುಂದಕ್ಕೆ, ಅದೇ ರೀತಿಯ ಪ್ರೋತ್ಸಾಹ ನೀಡದಿರುವುದೂ ಈ ಪ್ರಸಂಗ ನೇಪಥ್ಯಕ್ಕೆ ಸರಿಯಲು ಕಾರಣವಾಯಿತು ಎನ್ನಬಹುದು. ಒಂದಂತೂ ಸತ್ಯ, "ಈ ಪ್ರಸಂಗ ಇಷ್ಟು ಪ್ರದರ್ಶನ ಕಾಣಲು ಕಾರಣವಾದುದು ಯಕ್ಷಗಾನ ಅಭಿಮಾನಿಗಳ ಪ್ರೋತ್ಸಾಹದಿಂದ" ಎಂಬುದು ಉಲ್ಲೇಖನೀಯ.

***ಎಂ. ಶಾಂತರಾಮ ಕುಡ್ವ, ಮೂಡುಬಿದಿರೆ***

## ಕಾಮಿಡಿ ಜರ್ನಿ – ಕ್ಯಾದಗಿ ಟು ಬೆಂಗಳೂರು

**ಯಕ್ಷಗಾನದಲ್ಲಿ ಹಾಸ್ಯ ಇದೆ ಎಂಬ ಪರಿಕಲ್ಪನೆಯೇ ಇಲ್ಲದ ಪ್ರಪಂಚಕ್ಕೆ ಯಕ್ಷಗಾನದಲ್ಲಿ ಹೀಗೂ ಇದೆ ಎಂದು ತೋರಿ ಬಂದ ಕಿಲಾಡಿ, ಸೌಕೂರು ಮೇಳದ ವಿದೂಷಕ, ಬಹುಮುಖ ಪ್ರತಿಭೆ, ಹಾಸ್ಯ ಲೋಕದ ಇನಾಮ್‌ದಾರನ ಕಾಮಿಡಿ ಜರ್ನಿಯ ರಸವತ್ತಾದ ಮಾತುಕಥೆಯ ಭಾಗ**




**ಹೇಸರಗತ್ತೆಯನೇರುತ ಬಂದನು..** ಅಂತ ಝೀ ಕನ್ನಡ ವಾಹಿನಿಯ ಕಾಮಿಡಿ ಕಿಲಾಡಿ ವೇದಿಕೆಯೇರಿದ ಸಿದ್ದಾಪುರದ ಯಕ್ಷಪ್ರತಿಭೆ ಮಹಾಬಲೇಶ್ವರ ಭಟ್ ಕ್ಯಾದಗಿ. ಪ್ರಸ್ತುತ ಸೌಕೂರು ಮೇಳದಲ್ಲಿ ಕಲಾವಿದರಾಗಿ ಸೇವೆ ಸಲ್ಲಿಸುತ್ತಿರುವ ಕ್ಯಾದಗಿಯವರು ತಂದೆಯವರಿಂದಲೇ ಕಲೆಯನ್ನು ಬಳುವಳಿಯಾಗಿ ಪಡೆದುಕೊಂಡು ಬಂದವರು. ಸುದೀರ್ಘ ೨೧ ವರ್ಷಗಳ ಕಲಾವೃತ್ತಿಯಲ್ಲಿ ತೊಡಗಿಸಿಕೊಂಡಿರೋ ಕ್ಯಾದಗಿ, ಪ್ರಸಿದ್ಧ ಕಿರುತೆರೆ ಕಾರ್ಯಕ್ರಮವಾದ ಕಾಮಿಡಿ ಕಿಲಾಡಿಯಲ್ಲಿ ತಮ್ಮ ಅದ್ಭುತ ಪ್ರತಿಭೆಯನ್ನು ಪ್ರದರ್ಶಿಸಿ ಬಂದಿದ್ದು ನಿಜಕ್ಕೂ ಅಭಿನಂದನಾರ್ಹ. ಸಾಣೇಹಳ್ಳಿಯ ಶಿವಸಂಚಾರ ಎಂಬ ಥೇಟರ್‌ನಲ್ಲಿ ರಂಗಭೂಮಿ ಕಲಾವಿದರಾಗಿ ಪರಿಣತಿ ಪಡೆದುಕೊಂಡಿರೋ ಇವರು ಸುಮಾರು ಏಳು ಕಿರುತೆರೆ ಧಾರಾವಾಹಿಗಳಲ್ಲಿ ಅಭಿನಯಿಸಿ ಸೈ ಎನಿಸಿಕೊಂಡಿದ್ದಾರೆ. ದೂರದರ್ಶನ ವಾಹಿನಿಯಲ್ಲಿ ಪ್ರಸಾರವಾಗುತ್ತಿದ್ದ ಪರಂಪರೆ, ವಠಾರ, ಏಕೆ ಹೀಗೆ ನಮ್ಮ ನಡುವೆ, ವೆಂಕಟರಮಣ ಗೋವಿಂದ, ಕುಬೇರಪ್ಪ ಆಂಡ್ ಸನ್ಸ್, ಪಾರ್ವತೀ ಪರಮೇಶ್ವರ, ಪಾಂಡರಂಗ ವಿಠಲ ಎಂಬ ಧಾರಾವಾಹಿಗಳಲ್ಲಿ ಅಭಿನಯಿಸಿ ಜನಮನ್ನಣೆ ಪಡೆದುಕೊಂಡಿದ್ದಾರೆ. ಆರ್ಡಿ ಸಂದೇಶ್ ಶೆಟ್ಟಿ ನಿರ್ದೇಶನದ ಇನಾಮ್ದಾರ್ ಎಂಬ ಚಲನ ಚಿತ್ರದಲ್ಲಿ ಹಾಸ್ಯ ಪಾತ್ರದಲ್ಲಿ ಇವರು ಕಾಣಿಸಿಕೊಂಡಿದ್ದಾರೆ. ಇವರ ಈ ಕನಸುಗಳಿಗೆಲ್ಲಾ ಸತತ ಬೆಂಬಲವಾಗಿ ನಿಂತಿರೋದು ಇವರ ಮೆಚ್ಚಿನ ಮಡದಿ ಎಂದು ಹೆಮ್ಮೆಯಿಂದ ಹೇಳುತ್ತಾರೆ. ಇನ್ನು ಕಳೆದ ಲಾಕ್ ಡೌನ್ ಸಂದರ್ಭದಲ್ಲಿ ಪ್ರಾಯೋಗಿಕವಾಗಿ ಪ್ರದರ್ಶನ ನೀಡಿದ ***ಪುಷ್ಪಕ ಯಾನ*** ಎಂಬ ಏಕ ವ್ಯಕ್ತಿ ಯಕ್ಷ ಪ್ರದರ್ಶನ ಅಪಾರ ಜನಮನ್ನಣೆ ಪಡೆದುಕೊಂಡಿದ್ದು, ಇದರಲ್ಲಿ ಕ್ಯಾದಗಿ ಮಹಬಲೇಶ್ವರ ಭಟ್‌ರವರ ಕ್ರಿಯಾಶೀಲತೆ ಪಡಿಮೂಡಿದೆ. ಇದುವರೆಗೂ ಈ ಏಕವ್ಯಕ್ತಿ ಪ್ರದರ್ಶನ 86 ಪ್ರದರ್ಶನಗಳನ್ನು ಕಂಡಿರೋದು ದಾಖಲಾರ್ಹ. ಆದಿತ್ಯ ಎಂಬ ಹೆಸರಿನಲ್ಲಿ ಟ್ರಸ್ಟ್ ಸ್ಥಾಪನೆ ಮಾಡಿ ಯಕ್ಷಗಾನ ಕಲೆಯನ್ನು ಶಿಕ್ಷಣ ರೂಪದಲ್ಲಿ ಆಸಕ್ತರಿಗೆ ನೀಡಬೇಕು ಅನ್ನೊದು ಇವರ ಕನಸು.  ಇವರೊಂದಿಗೆ ನಾದನೂಪುರ ಯಕ್ಷ ಪತ್ರಿಕೆ ನಡೆಸಿದ ಸಂದರ್ಶನ ಇಲ್ಲಿದೆ.

***ಪ್ರಶ್ನೆ– ಝೀ ಕನ್ನಡ ಕಿರುತೆರೆಯ ಕಾಮಿಡಿ ಕಿಲಾಡಿಗಳ ಮನೆಯಲ್ಲಿ ಕೆಮರಾ ಎದುರಿಸಿದ ಅನುಭವ ಹಾಗೂ ಮಾರ್ಗದರ್ಶನಕರ ಮಾರ್ಗದರ್ಶನ ಈ ಅನುಭವಗಳು ಹೇಗಿದ್ದವು?***

ಕ್ಯಾದಗಿ ಮ. ಭಟ್– ಕ್ಯಾಮೆರಾ ಎದುರಿಸಿದ ಅನುಭವ ಹೊಸದೇನಲ್ಲ. ಈ ಹಿಂದೆಯೇ ಹಲವಾರು ಧಾರಾವಾಹಿ ಹಾಗೂ ಚಲನಚಿತ್ರಗಳಲ್ಲಿ ಪಾತ್ರಗಳನ್ನು ನಿರ್ವಹಿಸಿದ್ದರಿಂದ ಕೆಮರಾ ಮುಂದೆ ನಟಿಸುವುದು ಕಷ್ಟದ ಕೆಲಸವಾಗಿರಲಿಲ್ಲ. ಅಲ್ಲದೆ ಯಕ್ಷಗಾನ ಕಲಾವಿದನಾಗಿ ಇತರ ವೇದಿಕೆಗಳಲ್ಲಿ ಅಭಿನಯಿಸುವುದು ಕಷ್ಟ ಎಂದೆನಿಸುವುದಿಲ್ಲ. ಕಾಮಿಡಿ ಕಿಲಾಡಿಗಳು ಸೆಟ್ ನಲ್ಲಿ 32 ಕೆಮರಾಗಳನ್ನು ಅಲ್ಲಲ್ಲಿ ಅಳವಡಿಸಿರುತ್ತಾರೆ. ಅದರ ಮುಂದೆ ಸ್ಪರ್ಧಿಗಳು ನಟಿಬೇಕಾಗುತ್ತೆ. ಇದೊಂದು ಹೊಸ ಅನುಭವವಾಗಿತ್ತು ನನಗೆ. ಈ ಕಾರ್ಯಕ್ರಮದಲ್ಲಿ ಮಾರ್ಗದರ್ಶಕರ ಪಾತ್ರ ಬಹು ಮುಖ್ಯವಾದದ್ದು. ಏಕೆಂದರೆ ಕೇವಲ ೧೫–೨೦ ನಿಮಿಷಗಳಲ್ಲಿ ಒಂದು ಹಾಸ್ಯ ಸ್ಕಿಟ್ ನಡೆಯಬೇಕು. ಅಲ್ಲಿ ಎಲ್ಲರಿಗೂ ಸರಿಯಾದ ಪಾತ್ರ ಹಂಚಿಕೆ ಸಮಯ ಹಂಚಿಕೆ ಮಾಡಿ ನಿರ್ವಹಣೆ ಮಾಡಬೇಕಿತ್ತು. ಈ ವೇದಿಕೆಯಿಂದ ನಾನು ಬಹಳಷ್ಟು ಕಲಿತಿದ್ದೇನೆ.



ಪುಷ್ಪಕ ಯಾನ ಮೋನೋ ಆಕ್ಟ್ ನ ದೃಶ್ಯ

***ಪ್ರಶ್ನೆ– ನಿಮ್ಮ ನೈಜ ಕಲೆಯನ್ನು ಪ್ರದರ್ಶಿಸುವುದಕ್ಕೆ ಯಕ್ಷ ರಂಗ ಉತ್ತಮವೋ ಅಥವ ದೃಶ್ಯ ಮಾಧ್ಯಮ ಉತ್ತಮವೋ?***

ಕ್ಯಾದಗಿ ಮ. ಭಟ್– ಸ್ವಂತ ಕಲೆ ಹಾಗೂ ಸ್ವಂತ ಪ್ರತಿಭೆಯನ್ನು ತೋರಿಸುವುದಕ್ಕೆ ಯಕ್ಷಗಾನ ಒಂದು ಅತ್ಯುತ್ತಮ ವೇದಿಕೆ. ದೃಶ್ಯ ಮಾಧ್ಯಮದಲ್ಲಿ ಪ್ರತಿಯೊಂದು ಕಾರ್ಯಕ್ರಮಕ್ಕೆ ಮೊದಲು ತಯಾರಿ ಮಾಡಿಕೊಂಡು ಹಲವಾರು ಬಾರಿ ಅಭ್ಯಾಸ ಪ್ರದರ್ಶನಗಳನ್ನು ಮಾಡಿದ ನಂತರ ಮಾಧ್ಯಮದಲ್ಲಿ ಪ್ರಸಾರವಾಗುತ್ತದೆ. ಆದರೆ ಯಕ್ಷರಂಗದಲ್ಲಿ ನಮ್ಮ ಜ್ಞಾನದ ಪ್ರದರ್ಶನ ಹಾಗೂ ನಮ್ಮಲ್ಲಿರುವ ಕಲೆಯ ಪ್ರದರ್ಶನ ನೇರವಾಗಿ ವೇದಿಕೆಯಲ್ಲಿ ನಡೆಯುತ್ತದೆ. ಹಾಗೂ ಹಲವಾರು ರೀತಿಯಲ್ಲಿ ನಮ್ಮ ಪ್ರತಿಭೆಯನ್ನು ತೋರಿಸಬಹುದು. ಉದಾಹರಣೆಗೆ ವೇಷ, ಹೆಜ್ಜೆ, ಹಾವ–ಭಾವ, ಮಾತು, ಪದ್ಯ ಇದೆಲ್ಲದರ ಜ್ಞಾನವೂ ಕಲಾವಿದನಿಗೆ ಬೇಕಾಗುತ್ತದೆ. ಯಕ್ಷಗಾನವೆಂಬುದು ಕೆಲವು ಜಿಲ್ಲೆಗಳ ಜನರಿಗೆ ಮಾತ್ರ ತಿಳಿದಿದ್ದರೆ ದೃಶ್ಯ ಮಾಧ್ಯಮದ ವಿಸ್ತಾರ ಹೆಚ್ಚು. ಕೆಲವು ಜಿಲ್ಲೆಗಳನ್ನು ಹೊರತು ಪಡಿಸಿ ಯಕ್ಷಗಾನದಲ್ಲಿ ಹಾಸ್ಯ ಇದೆ ಎಂಬ ಪರಿಕಲ್ಪನೆ ಇತರ ಜನರಿಗಿಲ್ಲ. ಕಾಮಿಡಿ ಕಿಲಾಡಿಗಳು ವೇದಿಕೆಗೆ ಹೋಗಿರುವುದರಿಂದ ಹೆಚ್ಚಿನವರಿಗೆ ಇದನ್ನು ತಿಳಿಸಲು ನನ್ನಿಂದ ಸಾಧ್ಯವಾಯಿತು.



ಸಂದರ್ಶನ: ಅನನ್ಯ ಆರ್

***ಪ್ರಶ್ನೆ– ಕಾಮಿಡಿ ಮನೆಯೊಳಗಿದ್ದಾಗ ನಿಮ್ಮ ಪತ್ನಿಯ ಬೆಂಬಲ ಸಹಾಯ ಹೇಗಿತ್ತು?***

ಕ್ಯಾದಗಿ ಮ. ಭಟ್– ಕಾಮಿಡಿ ಕಿಲಾಡಿಗಳು ಕಾರ್ಯಕ್ರಮಕ್ಕೆ ಆಯ್ಕೆಯಾದಾಗ ಯಕ್ಷಗಾನದ ಬಂಧುಗಳು ಹೆಚ್ಚು ಸಂಭ್ರಮ ಪಟ್ಟಿದ್ದರು. ಎರಡುವರೆ ತಿಂಗಳ ಕಾಲ ಕಿಲಾಡಿಗಳು ತಂಡದೊಂದಿಗಿದ್ದೆ. ಈ ಅವಧಿಯಲ್ಲಿ ನಮಗೆ ಸಂಭಾವನೆ ಏನೂ ದೊರಕುವುದಿಲ್ಲ. ಆದರೆ ನಮಗೆ ವೈಯುಕ್ತಿ ಖರ್ಚುಗಳಿರುತ್ತವೆ. ಈ ಸಂದರ್ಭ ಕುಟುಂಬದ ಖರ್ಚು, ನನ್ನ ಖರ್ಚು ಎರಡನ್ನೂ ನೋಡಿಕೊಂಡು ನನ್ನ ಮಡದಿ ನನಗೆ ಸಂಪೂರ್ಣ ಸಹಕಾರ ನೀಡಿದ್ದಾರೆ. ಆದ್ದರಿಂದಲೇ ಹಲವು ಸಂಚಿಕೆಗಳನ್ನು ಯಾವುದೇ ಒತ್ತಡಗಳಿಲ್ಲದೇ ಸಮರ್ಥವಾಗಿ ನಿಭಾಯಿಸಲು ನನ್ನಿಂದ ಸಾಧ್ಯವಾಯಿತು. ನನ್ನಾಕೆ ಎಲ್ಲಾ ಸಮಯದಲ್ಲಿ ನನಗೆ ಮನಸ್ಥೈರ್ಯವನ್ನು ತುಂಬುತ್ತಾ ನಾನು ಮುನ್ನಡೆಯುವಲ್ಲಿ ಸಹಕಾರಿಯಾಗಿದ್ದಾರೆ.

## ಸಾಲಿಗ್ರಾಮ ಮೇಳದ ಪಳ್ಳಿ ಸೋಮನಾಥ ಹೆಗ್ಡೆ ಪ್ರಶಸ್ತಿ ಪುರಸ್ಕೃತ; ಅರವತ್ತರ ಅಭಿಜಾತ ಕಲಾವಿದ; ತೀರ್ಥಹಳ್ಳಿ ಗೋಪಾಲ ಆಚಾರ್ಯ

ಬಡಗುತಿಟ್ಟು ಯಕ್ಷಗಾನ ರಂಗದ ಅಭಿಜಾತ ಕಲಾವಿದರೆನಿಸಿಕೊಂಡ ಸುಮಾರು ನಾಲ್ಕು ದಶಕಗಳಿಗೂ ಅಧಿಕ ಕಾಲ ಅಭಿಮನ್ಯು ಬಬ್ರುವಾಹನದಂತ ಪುಂಡು ವೇಷಗಳಲ್ಲಿ ಮೆರೆದು ಕ್ರಾಂತಿ ಮೂಡಿಸಿ ಯಕ್ಷರಂಗದ ಅಭಿಮನ್ಯು, ಯಕ್ಷಗಾನದ ಸಿಡಿಲಮರಿ, ಚಿರಯುವಕ ಎಂಬಿತ್ಯಾದಿ ಬಿರುದು ಪಡೆದು ಪುಂಡುವೇಷದಲ್ಲಿ ವಿಶಿಷ್ಟ ಹೆಸರು ಮಾಡಿದ ಕೀರ್ತಿ ತೀರ್ಥಹಳ್ಳಿ ಗೋಪಾಲಾಚಾರ್ಯರಿಗೆ ಸಲ್ಲುತ್ತದೆ. ಅವರ ಈ ಸಾಧನೆಗೆ ಸಾಲಿಗ್ರಾಮ ಶ್ರೀ ಗುರು ಪ್ರಸಾದಿತ ಯಕ್ಷಗಾನ ಮೇಳದ 2022-23ನೇ ತಿರುಗಾಟದ ದೇವರ ಸೇವೆಯಾಟದಂದು ಸಾಲಿಗ್ರಾಮದಲ್ಲಿ ಪಳ್ಳಿ ಸೋಮನಾಥ ಹೆಗ್ಡೆ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಕಳೆದ ಮೂರು ವರ್ಷದಿಂದ ವೃತ್ತಿ ಮೇಳಕ್ಕೆ ವಿದಾಯ ಹೇಳಿದ ಅವರ ಈಗಿನ ಪ್ರಾಯ ಅರವತ್ತು ವರ್ಷ. ವಯೋ ಸಹಜವಾಗಿ ನಿವೃತ್ತಿ ಘೋಷಿಸಿದರೂ ಅವರ ಅಭಿಮಾನಿಗಳು ಇನ್ನೂ ಹತ್ತು ವರ್ಷ ಅವರ ವೇಷಗಳನ್ನು ನೋಡುವ ನಿರೀಕ್ಷೆಯಲ್ಲಿದ್ದಾರೆ. ಅವರ ಹಿರಿಯರು ಹಾಕಿಕೊಟ್ಟ ಮಾರ್ಗದರ್ಶನದಂತೆ ಪ್ರೇಕ್ಷಕರು ಬೇಕು ಬೇಕೆನ್ನುವಾಗಲೇ ನಿವೃತ್ತಿ ಹೊಂದುವುದು ಜಾಣತನ ಎನ್ನುವುದು ಅವರ ನಿರ್ಣಯ.

ಕೆತ್ತನೆ ಕೆಲಸ, ಶಿಲ್ಪಕಲೆ, ಕುಸುರಿ ಕಲೆ, ಸಂಗೀತ ಬರವಣಿಗೆ, ಪತ್ರಿಕೋದ್ಯಮ ಮುಂತಾದ, ಕಲಾಪ್ರಕಾರಗಳಲ್ಲಿ ನಿಷ್ಣಾತರಾದ ವಿಶ್ವಕರ್ಮ ಸಮಾಜವು ಯಕ್ಷಗಾನ ಕ್ಷೇತ್ರಕ್ಕೆ ಕೂಡ ಮಹೋನ್ನತ ಕಲಾವಿದರನ್ನು ನೀಡಿದೆ. ರಾಜ್ಯ ಪ್ರಶಸ್ತಿ ಪುರಸ್ಕೃತ ಭಾಗವತ ನೆಲ್ಲೂರು ಮರಿಯಪ್ಪಾಚಾರ್, ಮದ್ದಳೆ ಮಾಂತ್ರಿಕ ಹುಂಚದಕಟ್ಟೆ ಶ್ರೀನಿವಾಸ ಆಚಾರ್, ಚಂಡೆವಾದಕ ತೀರ್ಥಹಳ್ಳಿ ಚಂದ್ರಾಚಾರ್, ಉಭಯ ತಿಟ್ಟುಗಳ ಸ್ತ್ರೀ ವೇಷಧಾರಿ ಎಂ.ಕೆ. ರಮೇಶಾಚಾರ್, ಬಣ್ಣದ ವೇಷಧಾರಿ ಎಳ್ಳಂಪಳ್ಳಿ ಜಗನ್ನಾಥ ಅಚಾರ್ ಹೀಗೆ ಹಿಮ್ಮೇಳ–ಮುಮ್ಮೇಳವೆರಡರಲ್ಲೂ ಯಕ್ಷಲೋಕಕ್ಕೆ ಕಲಾವಿದರನ್ನು ನೀಡಿದ ಕೀರ್ತಿ ವಿಶ್ವಕರ್ಮ ಸಮಾಜಕ್ಕಿದೆ. ವಿಶ್ವಕರ್ಮರಿಗೆ ಜನ್ಮದತ್ತವಾಗಿ ಬರುವ ಅದ್ಭುತ ಲಯ, ಅಪಾರ ಶ್ರುತಿಬದ್ಧತೆ, ಪಾತ್ರ ಯಾವುದೇ ಇರಲಿ ಪ್ರವೇಶದಿಂದ ನಿರ್ಗಮನದವರೆಗೆ ಪ್ರೇಕ್ಷಕರನ್ನು ಹಿಡಿದಿಟ್ಟುಕೊಳ್ಳುವ ಚಾಕಚಕ್ಯತೆಯಿಂದ ಸ್ವಂತ ಪ್ರತಿಭೆಯಿಂದ ಮೂಡಿಬಂದ ಸಭ್ಯ ಶಿಸ್ತುಬದ್ಧ ಕಲಾವಿದ ಇದೇ ಸಮಾಜದ ಇನ್ನೊಬ್ಬ ಮೇರು ಕಲಾವಿದ ತೀರ್ಥಹಳ್ಳಿ ಗೋಪಾಲಾಚಾರ್ಯರು. ಯಕ್ಷಗಾನದ ಉಭಯ ತಿಟ್ಟುಗಳಿಗೆ ಮಹಾನ್ ಕಲಾವಿದರನ್ನು ನೀಡಿದ ಮಲೆನಾಡಿನ ತೀರ್ಥಹಳ್ಳಿ ಗೋಪಾಲಾಚಾರ್ಯರ ಹುಟ್ಟೂರಾದರೂ ಅವರ ಯಕ್ಷಗಾನ ಕಾರ್ಯಕ್ಷೇತ್ರ ಉಡುಪಿ ಜಿಲ್ಲೆ. ಬಹಳ ಹಿಂದಿನಿಂದಲೂ ಕುಂದಾಪುರ ತಾಲೂಕಿನ ನಾಯ್ಕನಕಟ್ಟೆಯಲ್ಲಿ ನೆಲೆನಿಂತ ಇವರು ತೀರ್ಥಹಳ್ಳಿಯಲ್ಲಿ ವಾಸುದೇವ ಆಚಾರ್ಯ ಸುಲೋಚನಮ್ಮ ದಂಪತಿಗಳ ಐದು ಮಂದಿ ಮಕ್ಕಳಲ್ಲಿ ಎರಡನೆಯವರಾಗಿ ಜನಿಸಿದರು. ಕೇವಲ ೩ನೇ ತರಗತಿ ವಿದ್ಯಾಭ್ಯಾಸ ಮಾಡಿ ತೀರ್ಥಹಳ್ಳಿ ಕೃಷ್ಣೋಜಿರಾಯರಲ್ಲಿ ಪ್ರಾಥಮಿಕ ಯಕ್ಷಗಾನ ಅಭ್ಯಾಸ ಮಾಡಿದರೂ ಉಳಿದದ್ದೆಲ್ಲ ಕಂಡು ಕೇಳಿ ಕಲಿತದ್ದೇ ಹೆಚ್ಚು. ಇವರ ಹೆಜ್ಜೆಗಾರಿಕೆಯಲ್ಲಿ ಮಟಪಾಡಿ ವೀರಭದ್ರ ನಾಯಕರ ಹೆಜ್ಜೆ ಗುರುತನ್ನು ಕಾಣಬಹುದಾಗಿದೆ. ತನ್ನ 14ನೇ ವಯಸ್ಸಿನಲ್ಲಿ ಮಲೆನಾಡಿನ ರಂಜದಕಟ್ಟೆ ಮೇಳದಲ್ಲಿ ಕೋಡಂಗಿಯಾಗಿ ಗೆಜ್ಜೆ ಕಟ್ಟಿದ ಇವರು ಹಿರಿಯಕಲಾವಿದರಂತೆ ಬಾಲಗೋಪಾಲ ಪೀಠಿಕಾ ಸ್ತ್ರೀವೇಷ, ಒಡ್ಡೋಲಗ ಪುಂಡುವೇಷ, ಪುರುಷವೇಷ ಹೀಗೆ ಹಂತಹಂತವಾಗಿ ಮೇಲೇರಿ ಸದ್ಯ ಎರಡನೇ ವೇಷದ ಸ್ಥಾನಕ್ಕೇರಿದವರೇ ವಿನಹ ಈಗಿನಂತೆ ದಿಡೀರ್ ಕಲಾವಿದರಾದವರಲ್ಲ. ಬಳಿಕ ನಾಗರಕೊಡಗೆ ಮೇಳಕ್ಕೆ ಸೇರ್ಪಡೆಗೊಂಡ ಇವರು ಅಲ್ಲಿನ ೨ ವರ್ಷ ತಿರುಗಾಟದ ಬಳಿಕ ಗೋಳಿಗರಡಿ ಮೇಳ ಸೇರುತ್ತಾರೆ. ಬಳಿಕ ಉಡುಪಿ ಜಿಲ್ಲೆಯಲ್ಲಿ ಆ ಕಾಲದಲ್ಲಿ ಜಯಭೇರಿ ಬಾರಿಸುತಿದ್ದ ಸಾಲಿಗ್ರಾಮ ಮೇಳಕ್ಕೆ ಪೀಠಿಕಾ ಸ್ತ್ರೀ ವೇಷಧಾರಿಯಾಗಿ ಸೇರ್ಪಡೆಯಾದದ್ದು ಆಚಾರ್ಯರ ಯಕ್ಷಗಾನ ಬದುಕಿನ ಸುವರ್ಣ ಯುಗವೆನ್ನಬಹುದು. ನೆಲ್ಲೂರು ಮರಿಯಪ್ಪಾಚಾರ್, ಗುಂಡ್ಮಿ ಕಾಳಿಂಗ ನಾವಡ, ಸದಾಶಿವ ಅಮೀನ್, ಶಂಕರ ಭಾಗವತ, ಮಂದಾರ್ತಿ ರಾಮಕೃಷ್ಣರವರ ಹಿಮ್ಮೇಳದಲ್ಲಿ ಜಲವಳ್ಳಿ

ವೆಂಕಟೇಶ ರಾವ್, ಶಿರಿಯಾರ್ ಮಂಜುನಾಯ್ಕ್, ಅರಾಟೆ ಮಂಜುನಾಥ, ಕಿನ್ನಿಗೋಳಿ ಮುಖ್ಯಪ್ರಾಣ, ರಾಮನಾಯರಿ, ಭಾಸ್ಕರ ಜೋಶಿ, ಬಳ್ಕೂರು ಕೃಷ್ಣ ಯಾಜಿ, ಐರೋಡಿ ಗೋವಿಂದಪ್ಪನವರ ಗಜಗಟ್ಟಿ ಮುಮ್ಮೇಳದಲ್ಲಿ ಹೊಸ ಪ್ರಸಂಗಗಳಲ್ಲಿ ದಾಖಲೆಯೆಂಬಂತೆ ಈವರೆಗೆ ಸಹಸ್ರಾರು ಪ್ರಯೋಗ ಕಂಡ ನಾಗಶ್ರೀ ಪ್ರಸಂಗದ ಬೆಳಗಿನ ಜಾವದ ಶೈಥಿಲ್ಯನಾಗಿ ಮೊದಲ ವರ್ಷದಲ್ಲೇ ಅಧಿಕೃತ ಪುಂಡುವೇಷಧಾರಿಯಾಗಿ ಬಹುಬೇಗ ಗುರುತಿಸಿಕೊಂಡರು. ಶಿರಿಯಾರ ಮಂಜುನಾಯ್ಕರನ್ನು ಅಧಿಕೃತ ಗುರುವಾಗಿರಿಸಿಕೊಂಡ ಇವರಿಗೆ ಸಾಲಿಗ್ರಾಮ ಮೇಳದ ಚೌಕಿಯೇ ಗುರುಕುಲವಾಯಿತು. ನಿರಂತರ ಹತ್ತು ವರ್ಷ ನಾಗಶ್ರೀ, ಚೆಲುವೆ ಚಿತ್ರಾವತಿ, ಶ್ರೀದೇವಿ ಬನಶಂಕರಿ, ರತಿರೇಖಾ, ಮುಂತಾದ ಪ್ರಸಂಗಗಳಲ್ಲಿ ಮೂರನೇ ವೇಷಧಾರಿಯಾಗಿ ಮಿಂಚಿದ ಇವರು ಪೌರಾಣಿಕ ಪ್ರಸಂಗಗಳಲ್ಲಿ ಅಭಿಮನ್ಯು, ಬಬ್ರುವಾಹನ, ಕುಶಲವ, ಧರ್ಮಾಂಗದ, ರುಕ್ಮಾಂಗ, ಶುಭಾಂಗ ಚಿತ್ರಕೇತ ಚಿತ್ರವಾಹನ, ಮೈಂದ–ದ್ವಿವಿದ ಮುಂತಾದ ಪುಂಡು ವೇಷದಿಂದ ಬಹುಬೇಗ ಜನಮನ ಗೆದ್ದರು. ಐರೋಡಿಯವರ ಸಭಾ ಅರ್ಜುನ, ಅರಾಟೆಯವರ ಚಿತ್ರಾಂಗದೆಗೆ ಆಚಾರ್ಯರ ಬಬ್ರುವಾಹನ ಆ ಕಾಲದ ಮಳೆಗಾಲದ ಪ್ರದರ್ಶನಗಳಲ್ಲಿ ಅಪಾರ ಯಶಸ್ಸು ಗಳಿಸಿತ್ತು. ಸಾಲಿಗ್ರಾಮ ಮೇಳದ ಹತ್ತು ವರ್ಷಗಳ ತಿರುಗಾಟದ ಬಳಿಕ ಶಿರಸಿ ಮೇಳಕ್ಕೆ ಸೇರಿದ ಇವರಿಗೆ ಚಿಟ್ಟಾಣಿ ಬಂಧುಗಳ ಒಡನಾಟ ದೊರೆತು ಬಡಾಬಡಗಿನ ನಾಟ್ಯ ಶೈಲಿಯನ್ನೂ ಕಲಿತು ಎರಡೂ ಶೈಲಿಗಳ ಅಧಿಕೃತ ಪ್ರಾತಿನಿಧಿಕ ಕಲಾವಿದರಾಗಿ ಮೂಡಿಬಂದರು.



ಇಂದಿಗೆ ಮೂವತ್ತೆರಡು ವರ್ಷದ ಹಿಂದೆ ೧೯೮೭ರಲ್ಲಿ ವೈ.ಕರುಣಾಕರ ಶೆಟ್ಟಿಯವರ ಯಜಮಾನಿಕೆಯಲ್ಲಿ ಡೇರೆ ಮೇಳವಾಗಿ ಪುನರಾರಂಭಗೊಂಡ ಶ್ರೀಪೆರ್ಡೂರು ಮೇಳಕ್ಕೆ ಪುರುಷವೇಷಧಾರಿಯಾಗಿ ಸೇರಿಕೊಂಡ ಇವರು ಇಂದಿನವರೆಗೂ ಅದೇ ಮೇಳದಲ್ಲಿ ತಿರುಗಾಟ ಮಾಡುತಿದ್ದು ಒಂದೇ ಮೇಳದಲ್ಲಿ ಮೂವತ್ತಕ್ಕೂ ಅಧಿಕ ವರ್ಷ ತಿರುಗಾಟ ಮಾಡಿದ ಕೆಲವೇ ಕೆಲವು ಕಲಾವಿದರಲ್ಲಿ ಒಬ್ಬರಾಗಿದ್ದಾರೆ. ಸುಬ್ರಮಣ್ಯ ಧಾರೇಶ್ವರ, ಸುರೇಶ ಶೆಟ್ಟಿ, ದುರ್ಗಪ್ಪ ಗುಡಿಗಾರ್, ಗಜಾನನ ದೇವಾಡಿಗ ಗಜಗಟ್ಟಿ ಹಿಮ್ಮೇಳದಲ್ಲಿ ನಗರ ಜಗನ್ನಾಥ ಶೆಟ್ಟಿ, ಗೋಡೆ ನಾರಾಯಣ ಹೆಗಡೆ, ಆರ್ಗೋಡು ಮೋಹನದಾಸ ಶೆಣೈ, ಉಪ್ಪುಂದ ನಾಗೇಂದ್ರ ಮುರೂರು ರಮೇಶ ಭಂಡಾರಿ, ರಾಮ ನಾಯರಿ, ಮುಂತಾದ ಕಲಾವಿದರೊಂದಿಗೆ ಪ್ರಥಮ ವರ್ಷವೇ ದಾಖಲೆ ನಿರ್ಮಿಸಿದ ಶೂದ್ರ ತಪಸ್ವಿನಿ, ಅಲ್ಲದೇ ಪರ್ಡೂರು ಮೇಳದ ಖ್ಯಾತಿವೆತ್ತ ಪ್ರಸಂಗಗಳಾದ ಪದ್ಮ ಪಲ್ಲವಿ, ಚಾರುಚಂದ್ರಿಕೆ, ಮಾನಸ ಮಂದಾರ, ಪುಷ್ಪಾಂಜಲಿ, ಶಿವರಂಜಿನಿ, ದಾಮಿನಿ ಭಾಮಿನಿ, ನಾಗವಲ್ಲಿ ಪ್ರಸಂಗಗಳ ಯಶಸ್ಸಿನಲ್ಲಿ ಆಚಾರ್ಯರ ಕೊಡುಗೆ ಅಪಾರ. ರಾಮ ನಾಯರಿ ಮತ್ತು ಗೋಪಾಲಾಚಾರ್ಯರ ಜೋಡಿ ವೇಷ, ಪ್ರಣಯ ಹಾಗೂ ಶೃಂಗಾರ ದ್ರಶ್ಯಗಳು, ದೀಪನೃತ್ಯ ಇತ್ಯಾದಿ ನವನವೀನ ಸನ್ನಿವೇಶಗಳು ಅಪಾರ ಜನಮನ್ನಣೆ ಪಡೆದವು. ಪೌರಾಣಿಕ ಪ್ರಸಂಗಗಳಲ್ಲಿ ನಾಯರಿಯವರ ಚಿತ್ರಾಂಗದೆಗೆ ಬಬ್ರುವಾಹನ, ಸುಭದ್ರೆಗೆ ಅಭಿಮನ್ಯು ಪ್ರಭಾವತಿಗೆ ಸುಧನ್ವ ಮುಂತಾದ ವೇಷಗಳೂ ಸಹ ಅಷ್ಟೇ ಜನಮನ್ನಣೆ ಗಳಿಸಿತ್ತು. ಅಭಿಮನ್ಯು ಪಾತ್ರಕ್ಕೆ ಗೋಪಾಲಾಚಾರ್ಯರೇ ಸಾಟಿ. ಆಚಾರ್ಯರು ಅಂದರೆ ಅಭಿಮನ್ಯು, ಅಭಿಮನ್ಯು ಅಂದರೆ ಆಚಾರ್ಯರು ಅನ್ನುವಷ್ಟು ಅವರಿಗೆ ಖ್ಯಾತಿ ಬರಲು ಬಹು ಕಾಲ ಬೇಕಾಗಲಿಲ್ಲ. ಆಚಾರ್ಯರಿಗೆ ಕೀರ್ತಿ ತಂದುಕೊಟ್ಟ ಇನ್ನೊಂದು ಪಾತ್ರ ಶ್ರೀಕ್ರಷ್ಣ. ಯಾವುದೇ ಪ್ರಸಂಗದ ಕೃಷ್ಣನಿರಲಿ ಅದು ಜಾಂಬವತಿ ಕಲ್ಯಾಣವಿರಲಿ, ಕನಕಾಂಗಿ ಕಲ್ಯಾಣವಿರಲಿ ರುಕ್ಮಾವತಿ ಕಲ್ಯಾಣವಿರಲಿ, ರುಕ್ಮಿಣಿ ಕಲ್ಯಾಣವಿರಲಿ, ಸುಭದ್ರಾ ಕಲ್ಯಾಣವಿರಲಿ ಅವರ ಕೃಷ್ಣನ ಪಾತ್ರದ ನಡೆಯೇ ವಿಶಿಷ್ಟ. ತಮ್ಮ ಮಾತಿನ ಮೋಡಿಯಿಂದ ಅವರೆಂದೂ ರಂಗಸ್ಥಳದ ಆವರಣ ಭಂಗ ಮಾಡಿದವರಲ್ಲ. ಶೈಲಿಯೂ ನೂರಕ್ಕೆ ನೂರು ಯಕ್ಷಗಾನ.



ಉಂಗುರ ಹಾಕಿ ಉಂಗುರ ತೆಗೆಯಬಲ್ಲುದಾದ ವೇಷಗಾರಿಕೆ. ಪ್ರಸಂಗ ಸಾಹಿತ್ಯದ ಸದಾಶಯವನ್ನು ಬಿಡದೆ ಪ್ರತಿಪಾದಿಸಿ ಕಡೆದು ನಿಲ್ಲಿಸಿದ ಬಿಂಬದ ಸ್ವರೂಪವನ್ನು ಸುಲಲಿತವಾಗಿ ಪ್ರೇಕ್ಷಕರಿಗೆ ದಾಟಿಸುವ ಚಾಕಚಕ್ಯತೆ, ಸುಂದರವಾದ ಕಾವ್ಯ ರಚನೆ, ಆಕರ್ಷಕವಾದ ನಿರೂಪಣೆ, ವಿಷಯ ಸಂಪತ್ತು ಆಚಾರ್ಯರ ಹೆಚ್ಚುಗಾರಿಕೆ. ಚಂದ್ರಹಾಸನಾಗಿ "ಅರರೇ ಏನ್ ಸೊಬಗು ಕಾಣುವುದಿಲ್ಲಿ ನೇತ್ರ ಸಹ ಹರುಷವ ಕಾಂಬ ತೆರನಿಲ್ಲಿ" ಪದ್ಯದ ಅರ್ಥಗಾರಿಕೆಯೊಂದೇ ಸಾಕು ಅವರ ಮಾತುಗಾರಿಕೆಯನ್ನು ನಿರ್ಣಯಿಸಲು.

ಗೋಪಾಲಾಚಾರ್ಯರಲ್ಲಿ ವಿಶೇಷವಾಗಿ ಗುರುತಿಸಬೇಕಾಗಿದ್ದು ಬಡಗು ಮತ್ತು ಬಡಾಬಡಗಿನ ನೃತ್ಯ ಶೈಲಿಯನ್ನು ವೃತ್ತಿ ರಂಗದಲ್ಲಿ ಕೆರೆಮನೆ ಕಲಾವಿದರು ಮತ್ತು ಹಾರಾಡಿ ಕಲಾವಿದರನ್ನು ಬಿಟ್ಟರೆ ಉಳಿದೆಲ್ಲಾ ಕಲಾವಿದರ ಒಡನಾಡಿಯಾಗಿ ದುಡಿದ ಇವರಲ್ಲಿ ಬಡಗಿನ ಎರಡು ಪ್ರಮುಖ ನೃತ್ಯ ಶೈಲಿಯನ್ನು ಗುರುತಿಸಬಹುದಾಗಿದೆ. ಶ್ರುತಿ ಬದ್ಧತೆ ಮಾತುಗಾರಿಕೆಯಲ್ಲಿ ಅವರ ದೀರ್ಘಕಾಲದ ಒಡನಾಡಿಗಳಾದ ಶಿರಿಯಾರ ಮಂಜು ನಾಯಕ್ ಮತ್ತು ನಗರ ಜಗನ್ನಾಥ ಶೆಟ್ಟಿಯವರ ಪ್ರಭಾವವನ್ನು ಗುರುತಿಸಬಹುದು. ನಿರಾತಂಕವಾಗಿ ನಿರರ್ಗಳವಾಗಿ ನಿರಾಯಾಸವಾಗಿ ಪುಂಖಾನುಪುಂಕವಾಗಿ ಶ್ರುತಿಬದ್ಧವಾಗಿ ಹರಿದು ಬರುವ ಆಚಾರ್ಯರ ಮಾತುಗಾರಿಕೆಯಲ್ಲಿ ಈ ಈರ್ವರು ಹಿರಿಯ ಕಲಾವಿದರ ಪ್ರಭಾವವನ್ನು ಗುರುತಿಸಬಹುದು. ವೇಷಗಾರಿಕೆಯ ಸೊಬಗು ಹಾಗೂ ಮಾತುಗಾರಿಕೆಯ ಮೋಡಿಯೂ ಅಷ್ಟೇ ಸೊಗಸು. ರಸಭಾವಗಳ ಪರಿಪೂರ್ಣ ಪೋಷಣೆಯಲ್ಲಿ ಅವರು ತೋರಿಸುವ ಅಸಾಧಾರಣ ಪ್ರತಿಭೆ ನಿಜಕ್ಕೂ ಪ್ರಶಂಸಾರ್ಹ.

ಅರ್ಜುನನು "ಆವರಾಯ ನಾತ್ಮಭವನೋ ವೀರನೀತ" ಎಂದು ಹೀಯಾಳಿಸುವಾಗ ನಖಶಿಖಾಂತ ಕೋಪಾವಿಷ್ಟನಾಗಿ ಮಾತನಾಡುವ ಬಬ್ರುವಾಹನನಿರಲಿ, "ತಿಳಿದೆನು ನಿನ್ನಯ ಚಿತ್ತದುಮ್ಮಳವ" ಎನ್ನುವಲ್ಲಿ ಮೋಕ್ಷಕ್ಕೆ ಸನ್ನಿಹಿತನಾದ ಭಕ್ತಿ ಭಾವದ ಸುಧನ್ವನಿರಲಿ, "ಸುರಿವ ಕಂಬನಿಯನ್ನು ಸೆರಗಿಂದೊರೆಸಿ ಮಾತೆಯ ಪಾದರಜವನು." ಎನ್ನುವಲ್ಲಿ ದ್ವಂದ್ವಕ್ಕೆ ಸಿಲುಕಿದ ಅಭಿಮನ್ಯುವಿರಲಿ, "ಮಲಗಿರುವ ಪಿತನನ್ನು ಎಬ್ಬಿಸುತ ಗಾಂಗೇಯ" ಎನ್ನುವಲ್ಲಿ ತಂದೆಗೆ ಮದುವೆ ಮಾಡಿಸುವ ದೇವವ್ರತನಿರಲಿ, "ಬಂದೆಯ ಇನವಂಶ ವಾರಿಧಿ ಚಂದಿರನೆ"ಎನ್ನುವಲ್ಲಿ ಭರತನಲ್ಲಿ ರಾಮನ ಭಾತೃ ವಾತ್ಸಲ್ಯವಿರಬಹುದು. "ಪುರಜನರ ನುಡಿ ಕೇಳಿ



ಪ್ರೋ.ಎಸ್.ವಿ.ಉದಯ ಕುಮಾರ ಶೆಟ್ಟಿ

ಹರಿಯು ತನ್ನಯ ಮನದಿ" ಎನ್ನುವಲ್ಲಿ ಮೈಂದ ದ್ವಿವಿದರನ್ನು ನೆನೆಸಿಕೊಳ್ಳುವ ಕೃಷ್ಣನಿರಲಿ ಇಲ್ಲೆಲ್ಲಾ ಆಚಾರ್ಯರ ಮಾತುಗಾರಿಕೆಯ ಮೋಡಿ ವರ್ಣಿಸಲಸದಳ. ಹೊಸ ಸಾಮಾಜಿಕ ಪ್ರಸಂಗಗಳಲ್ಲೂ ಭಾವಪೂರ್ಣವಾಗಿ ಅಭಿನಯಿಸುವ ಇವರ ಶೂದ್ರ ತಪಸ್ವಿನಿ, ಪದ್ಮಪಲ್ಲವಿ, ನಾಗವಲ್ಲಿ ಪ್ರಸಂಗಗಳ ಪಾತ್ರಗಳೇ ಸಾಕು ಇವರ ಅಭಿನಯ ಸಾಮರ್ಥ್ಯ ಮತ್ತು ಮಾತುಗಾರಿಕೆಯನ್ನು ಅಳೆಯಲು.

ಸುಮಾರು ೪೬ ವರ್ಷ ಬಡಗುತಿಟ್ಟು ರಂಗಸ್ಥಳವನ್ನು ಶ್ರೀಮಂತಗೊಳಿಸಿದ ಆಚಾರ್ಯರು ಕೋಡಂಗಿಯಿಂದ ಸದ್ಯ ಪೆರ್ಡೂರು ಮೇಳದ ಎರಡನೇ ವೇಷದವರೆಗೆ ನಡೆದು ಬಂದ ಯಶೋಗಾಥೆ ಇನ್ನೊಬ್ಬರಿಗೆ ಆದರ್ಶವಾದದ್ದು. ನೆಲ್ಲೂರು ಮರಿಯಪ್ಪಾಚಾರ್, ಮರವಂತೆ ನರಸಿಂಹ ದಾಸ್, ಕಾಳಿಂಗ ನಾವಡ, ಸುಬ್ರಮಣ್ಯ ಧಾರೇಶ್ವರರಿಂದ ಇಂದಿನ ಭಾಗವತ ರಾಘವೇಂದ್ರ ಆಚಾರ್ಯರವರೆಗೆ ಸುಮಾರು ಮೂರು ತಲೆಮಾರಿನ ಭಾಗವತರ ಪದ್ಯಕ್ಕೆ ಹೆಜ್ಜೆ ಹಾಕಿದ್ದೂ ಅಲ್ಲದೇ ಮೂರು ತಲೆಮಾರಿನ ಹಿರಿಯ ಕಿರಿಯ ಕಲಾವಿದರೊಂದಿಗೆ ಹೆಜ್ಜೆ ಹಾಕಿದ ಕೀರ್ತಿ ಸಹ ಇವರಿಗಿದೆ. ಎರಡನೇ ವೇಷದ ಸ್ಥಾನದಲ್ಲಿದ್ದರೂ ಸೌಮ್ಯ ಸ್ವಭಾವದ ಮಿತಭಾಷಿಯಾದ ಇವರು ಎಂದಿಗೂ ಸ್ವಾಭಿಮಾನ ಬಿಡದೆ ಇನ್ನೊಬ್ಬರಲ್ಲಿ ಸಹಾಯಹಸ್ತ ಯಾಚಿಸಿದವರಲ್ಲ. ರಂಗದ ಚಲನೆ ನಿಲುವಿನಲ್ಲಿ ಸ್ವಂತಿಕೆಯ ಛಾಪು, ಹೆಚ್ಚೂ ಅಲ್ಲದ ಕಡಿಮೆಯೂ ಅಲ್ಲದ ಸಮತೂಕದ ಮಾತು. ಔಚಿತ್ಯಕ್ಕೆ ತಕ್ಕ ಅಭಿನಯ, ಅಧಿಕವಲ್ಲದ ಕುಣಿತ, ರಂಗದ ಅಚ್ಚುಕಟ್ಟು, ಸುಸ್ಪಷ್ಟ ಮಾತು, ಅಪಾರ ಪ್ರತ್ಯುತ್ಪನ್ನತಾ ಮತಿತ್ವ, ಶ್ರುತಿಬದ್ಧತೆ, ಶಿಸ್ತುಬದ್ಧತೆಯಿಂದ ಅಭಿವ್ಯಕ್ತಿ ಪರಿಣಾಮಕಾರಿಯಾಗುವಂತೆ ನೋಡಿಕೊಳ್ಳುವ ಜಾಗರೂಕತೆಯನ್ನು ಇವರ ವೇಷಗಾರಿಕೆಯಲ್ಲಿ ಖಚಿತವಾಗಿ ಗಮನಿಸಬಹುದು. ದೇವರೂ ಎಲ್ಲವನ್ನೂ ಒಬ್ಬ ವ್ಯಕ್ತಿಗೆ ನೀಡುವುದಿಲ್ಲ ಎಂಬ ಲೋಕರೂಢಿಯಂತೆ ಆಳ್ತನದಲ್ಲಿ ಸ್ವಲ್ಪ ಇನ್ನೂ ಎತ್ತರವಾಗಿದ್ದರೆ ಯಕ್ಷಲೋಕದ ಯಾವುದೇ ಒಬ್ಬ ಅಗ್ರಶ್ರೇಣಿಯ ಕಲಾವಿದರ ಸಾಲಿಗೆ ಇವರನ್ನು ಸೇರಿಸಬಹುದು. ಬಡಗುತಿಟ್ಟಿನ ಮುಂಡಾಸು ವೇಷಕ್ಕೆ ಬೇಕಾದ ಎತ್ತರದ ಆಳ್ತನ ಇವರಲ್ಲಿಇಲ್ಲದಿರುದೊಂದೆ ಅವರ ಕೊರತೆ. ಇದು ಅವರ ದೋಷ ಅಲ್ಲಎಂದು ಪರಿಗಣಿಸಬೇಕಾಗುತ್ತದೆ

ಹಗಲು ವ್ಯವಹಾರದಲ್ಲಿ ಮಿತಭಾಷಿ, ದಾಕ್ಷಿಣ್ಯ ಸ್ವಭಾವದವರಾದ ಇವರು ಮಿತ ಸಂಸಾರಿ. ಪತ್ನಿ ಮಂಜುಳಾ ಮತ್ತು ಏಕಮಾತ್ರ ಪುತ್ರ ನಿಧೀಶ್ ದಾವಣಗೆರೆ ಸರ್ಕಾರಿ ಕಾಲೇಜಿನಲ್ಲಿ ಇಂಜಿನೀಯರಿಂಗ್ ವಿದ್ಯಾರ್ಥಿಯಾಗಿದ್ದಾನೆ. ಅರವತ್ತನೇ ಸಂವತ್ಸರ ದಾಟಿದ ಆಚಾರ್ಯರಿಗೆ ಅವರು ದೀರ್ಘ ಕಾಲ ಸೇವೆ ಸಲ್ಲಿಸಿದ ಸಾಲಿಗ್ರಾಮ ಮೇಳದ ಈ ಪ್ರಶಸ್ತಿ ಯೋಗ್ಯವಾಗಿಯೇ ಸಂದಿದೆ.

***ಪ್ರೋ.ಎಸ್.ವಿ ಉದಯಕುಮಾರ ಶೆಟ್ಟಿ ಮಣಿಪಾಲ***

## ಕನ್ನಡ ರಾಜ್ಯೋತ್ಸವ ವಿಶೇಷ ಲೇಖನ – ಕನ್ನಡ ಸಾಹಿತ್ಯಕ್ಕೆ ಯಕ್ಷಗಾನದ ಕೊಡುಗೆ

***ಕಳೆದ ಸಂಚಿಕೆಯಿಂದ .. ..***

ಕೃಷ್ಣ ಸಂಧಾನದ ಪ್ರಸಂಗ. ಧರ್ಮರಾಯನು ಸಂಧಾನಕ್ಕೆಂದು ಕೃಷ್ಣನನ್ನು ಹಸ್ತಿನಾವತಿಗೆ ಕಳುಹಿಸುವುದಕ್ಕೆ ಸಜ್ಜಾಗುತ್ತಿರುವ ವಿಷಯವನ್ನು ಭೀಮನಿಂದ ತಿಳಿದ ದ್ರೌಪದಿಗೆ ಒಮ್ಮೆಲೆ ಆಘಾತವಾಗುತ್ತದೆ. ಅವನಲ್ಲಿ ತನ್ನ ದುಃಖವನ್ನು ತೋಡಿಕೊಳ್ಳುತ್ತಾಳೆ. ಭೀಮನು "ಅಣ್ಣನವರಿಗೆ ನೀತಿಯಾದರೆ। ನಿನ್ನ ಮನಕೊಪ್ಪಿದರೆ ಭೂತಳ।ವನ್ನು ಕೌರವನಿತ್ತರೆ" ತನ್ನ ಅಭ್ಯಂತರವಿಲ್ಲವೆಂದು ಕೃಷ್ಣನಿಗೆ ಹೇಳಿದ್ದೇನೆ ಎಂದು ವಿಡಂಭನೆಯಲ್ಲಿ ಹೇಳಿದಾಗ ದ್ರೌಪದಿ ತನ್ನ ಆಕ್ರೋಶವನ್ನು ಧರ್ಮರಾಯನ ಮೇಲೆ ತೋರಿಸುತ್ತಾಳೆ. ಜೊತೆಗೆ ಭೀಮನನ್ನು ನಿಂದಿಸುತ್ತಾಳೆ. ಆಗ ಭೀಮ ಅಣ್ಣನ ವಿರುದ್ಧವೇ ಸಿಡಿದೇಳುವ ನಾಟಕೀಯ ಸನ್ನಿವೇಶವನ್ನು ಪ್ರಸಂಗದ ಈ ಸನ್ನಿವೇಶದಲ್ಲಿ ಗಮನಿಸಬಹುದಾಗಿದೆ. ಇಲ್ಲಿ ಮೇಲಿನ ಪದ್ಯಗಳು ಸ್ತ್ರೀ ವರ್ಣನೇ ಎಂದು ಅಥವಾ ಈ ಪದ್ಯದ ಸ್ಥಾಯಿಭಾವ ಶೃಂಗಾರವೆಂದು ತಿಳಿದುಕೊಂಡರೆ ತಪ್ಪು. ಇದರಲ್ಲಿ ವಿಡಂಭನೆ ,ವೀರ, ಕರುಣ ರಸವೇ ಇಲ್ಲಿ ಪ್ರಧಾನ. ಭೀಮನಲ್ಲಿ ಹೊಗೆಯಾಡುತ್ತಿದ್ದ ಅಸಮಧಾನಕ್ಕೆ ಬೆಂಕಿಯಲ್ಲಿಯೇ ಹುಟ್ಟಿದ ಯಜ್ಞಾಸೇನೆ ಗಾಳಿಯನ್ನು ಹಾಕಿ ಇನ್ನಷ್ಟು ಉರಿಯುವಂತೆ ಮಾಡುತ್ತಾಳೆ. ಅಗ್ನಿ ಮತ್ತು ವಾಯುವಿನ ತಳಹದಿಯ ಪಾತ್ರಗಳಾದ ಭೀಮ ಮತ್ತು ದ್ರೌಪದಿ ಪಾತ್ರಗಳನ್ನು ಒಬ್ಬರಿಗೊಬ್ಬರು ಪೂರಕವಾಗಿ ಪ್ರೇರಕವಾಗಿ ಇರುವುದನ್ನು ಕವಿ ಸೂಕ್ಷ್ಮವಾಗಿ ಹೇಳುತ್ತಾನೆ. ಜೊತೆಗೆ ಈ ಸನ್ನಿವೇಶವು ದಾಂಪತ್ಯದ ಮುನಿಸು, ಸರಸ, ನೋವು, ಆಕ್ಷೇಪ, ಕ್ರೋಧ ಇತ್ಯಾದಿ ರಸಭಾವಗಳ ಮಿಶ್ರಣವಾಗಿದೆ.

ಯರಕಲ ಕಾಂಬೋಧಿ ಅಷ್ಟ (ಪ್ರಸಂಗ: ಆದಿನಾರಾಯಣ ದರ್ಶನ, ಕವಿ: ಶ್ರೀಧರ್ ಡಿ.ಎಸ್)

ಪಾಲಗಡಲೊಳು ಪವಡಿಸಿದ ಕರು ।

ಣಾಲವಾಲನನು । ವಿಶ್ವದ । ಮೂಲಮೂರ್ತಿಯ ಸೇವಿಸುತಲಿಹ ।

ಶ್ರೀಲತಾಂಗಿಯನು । ಪಾರ್ಷದ । ರೋಲಗಿಸುವ ಸ್ವಮೂರ್ತಿಗಣಗಳ ।

ಲೀಲೆ ಮೆರೆವುದನು । ರಂಜಿಪ । ನೀಲವಕ್ಷದಿ ಕೌಸ್ತುಭದ ಮಣಿ ।

ಮಾಲೆ ಪೊಳೆವುದನು । ಸುತ್ತಿಹ । ವ್ಯಾಳಭೋಗವನಾಡಿಸುತ್ತಲಿ ।

ಮೇಲೆ ತೊನೆವುದನು । ಬೆಳಗುವ । ಸಾಲು ಸಾವಿರ ಸ್ತಂಭ ಸೊಗಸಿನ ।

ಏಳು ಬಾಗಿಲ ದಾಟಿ ಬರುತಲಿ । ಕಾಲಯಂತ್ರನಿಯಂತ್ರತಂತ್ರನ ।

ಪಾಲನಾ ಪುರುಷನನು ಕಂಡರು ॥

ಇಡೀ ಒಂದು ಪದ್ಯದಲ್ಲಿ ಸಮಗ್ರವಾಗಿ ವೈಕುಂಠವನ್ನು ಚಿತ್ರಿಸುವುದು ಈ ಪದ್ಯದ ವೈಶಿಷ್ಟ್ಯ. ಪ್ರಾಸನುಪ್ರಸದಲ್ಲಿ ಪೋಣಿಸಿ, ಅತ್ಯಂತ ಕಡಿಮೆ ಪದಗಳಲ್ಲಿ ವರ್ಣಿಸಿರುವುದು ಯಕ್ಷಗಾನ ಸಾಹಿತ್ಯವು ಕನ್ನಡವನ್ನು ಉತ್ಕೃಷ್ಟವಾಗಿ ಬಳಸಿದ ವಿಧಾನವನ್ನು ತಿಳಿಸುತ್ತದೆ. ಸಾಹಿತ್ಯಗಳು ಸಮಾಜದ ಮೇಲೆ ಪ್ರಭಾವವನ್ನು ಬೀರಿ ಸಾಮಾಜಿಕ ಕಳಕಳಿಯನ್ನು ಹಾಗೂ ಬದಲಾವಣೆಗೆ ಬೇಕಾದ ಪ್ರೇರಕ ಶಕ್ತಿಯಾಗಿ ನಿಲ್ಲಬೇಕಾಗುತ್ತದೆ. ಅದು ಸಮಾಜದ ಕೈಗನ್ನಡಿಯಾಗಿ ಸಮಾಜದ ಓರೆಕೋರೆಗಳನ್ನು ಒರೆಗೆ ಹಚ್ಚಿ ಸಾಮಾಜಿಕ ಪ್ರಜ್ಞೆಯನ್ನು ಜಾಗೃತಗೊಳಿಸುವ ವೈಚಾರಿಕತೆಯನ್ನು ಹೊಂದಿದಾಗ ಸಾಹಿತ್ಯ ಸಾರ್ಥಕವಾಗುತ್ತದೆ. ಈ ನಿಟ್ಟಿನಲ್ಲಿ ಯಕ್ಷಗಾನ ಸಾಹಿತ್ಯವನ್ನು ಗಮನಿಸುವಾಗ ಅಲ್ಲಿಯೂ ಕೂಡ ಸಾಮಾಜಿಕ ಕಳಕಳಿಯ ವಿಷಯಗಳನ್ನು ತನ್ನ ಕಥಾ ಹಂದರದ



ರವಿ ಮಡೋಡಿ

ಭಾಗವಾಗಿ ಪ್ರಚುರಪಡಿಸುತ್ತಿರುವುದನ್ನು ಕಾಣಬಹುದಾಗಿದೆ. ಗೇಯ ಪ್ರಬಂಧವಾದ ಯಕ್ಷಗಾನ ಸಾಹಿತ್ಯವು ಪುರಾಣದ ಕಥೆಯನ್ನು ಅಥವಾ ಸಾಮಾಜಿಕ ಕಥೆಗಳನ್ನು ಮಟ್ಟುಗಳಲ್ಲಿ ಅಥವಾ ಛಂದಸ್ಸಿನಲ್ಲಿ ಪೋಣಿಸಿ ಅದನ್ನು ಯಕ್ಷಗಾನದ ಮೂಲಕವಾಗಿ ಅಭಿವ್ಯಕ್ತಗೊಳ್ಳುವುದು ಅದರ ವೈಶಿಷ್ಟತೆ. ಒಂದು ಯಕ್ಷಗಾನ ಪ್ರಸಂಗವು ಉತ್ಕೃಷ್ಟವಾದ ರಚನೆಯಾಗಿರುವುದಕ್ಕೆ ಹಲವಾರು ಅಂಶಗಳು ಕಾರಣವಾಗಿರುತ್ತದೆ. ಅದರಲ್ಲಿ ಮುಖ್ಯವಾಗಿ ಪ್ರಸಂಗದ ಸಾಹಿತ್ಯವು ಸರಳವಾಗಿರಬೇಕು ಮತ್ತು ಅದನ್ನು ಹಾಡಿದಾಗ ಅದರ ಅರ್ಥವು ಆ ಕ್ಷಣದಲ್ಲಿಯೇ ಪ್ರೇಕ್ಷಕನಿಗೆ ತಿಳಿಯುವಂತಿರಬೇಕು. ಇದು ಯಕ್ಷಗಾನ ಸಾಹಿತ್ಯದ ಮೂಲ ತತ್ವವಾಗಿದೆ. ಅದರ ಜೊತೆಗೆ ಸಾಹಿತ್ಯದ ರಚನೆಯು ಛಂದೋಬದ್ಧವಾಗಿರಬೇಕು, ಗಾನ ನೃತ್ಯಗಳಿಗೆ ಆನುಕೂಲ್ಯವಾಗಿರಬೇಕು, ಅದು ವಿಶಾಲವಾದ ಅರ್ಥವನ್ನು ಸ್ಪುರಿಸುವಂತಿರಬೇಕು, ಸಂವಾದಕ್ಕೆ ಹಾಗೂ ಪ್ರದರ್ಶನಕ್ಕೆ ಅನುಕೂಲವಾಗಿರಬೇಕು, ಯಕ್ಷಗಾನೀಯ ಅಂಶಗಳ ಪ್ರತಿಪಾದನೆಗೆ ಅವಕಾಶಗಳಿರಬೇಕು ಎಂಬ ಇತ್ಯಾದಿ ಅಂಶಗಳು ಅಪೇಕ್ಷಣೀಯ ಗುಣಗಳಾಗಿವೆ. ಇದರ ಜೊತೆಗೆ ಬಹಳ ಮುಖ್ಯವಾಗಿ ಪ್ರಸಂಗ ಯಕ್ಷ ಸಾಹಿತ್ಯದ ರಚನೆಯಲ್ಲಿ ಮೂಲ ಕಥೆಗೆ ಭಂಗವಾಗದಂತೆ, ಅದರ ಭಾಗವಾಗಿಯೇ ಸಾಮಾಜಿಕ ಬದ್ಧತೆಯನ್ನು, ಕಳಕಳಿಯನ್ನು ಸಾಹಿತ್ಯವು ನಿವೇದಿಸಿದರೆ ಅದರ ಗಾಂಭೀರ್ಯ ಹಾಗೂ ಸೌಂದರ್ಯವು ಇನ್ನಷ್ಟು ಗಟ್ಟಿಯಾಗಿ ಪ್ರತಿಪಾದನೆಗೊಳ್ಳುತ್ತದೆ. ಇದೇ ಸೂತ್ರವನ್ನು ಬಹುತೇಕ ಯಕ್ಷಗಾನ ಕವಿಗಳು ಪಾಲಿಸಿರುವುದನ್ನು ಗಮನಿಸಬಹುದು. ತಮ್ಮ ಯಕ್ಷ ಸಾಹಿತ್ಯದಲ್ಲಿ ಸಾಮಾಜಿಕ ಕಾಳಜಿಯ ಅಂಶಗಳನ್ನು ಪ್ರಸಂಗದಲ್ಲಿ ಅಳವಡಿಸಿಕೊಂಡಿರುವುದನ್ನು ಕಾಣಬಹುದಾಗಿದೆ. ಇದಕ್ಕೆ ಮೂಲ ಕಾರಣ ಬಹುತೇಕ ಯಕ್ಷಗಾನ ಕವಿಗಳು ದೊಡ್ಡ ವಿದ್ವಾಂಸರರಾಗಲಿ ಅಥವಾ ಸಾಹಿತ್ಯದಲ್ಲಿ ಮನ್ನಣೆಯನ್ನು ಪಡೆದುಕೊಂಡವರಾಗಿರಲಿಲ್ಲ. ಅವರು ಜನರ ಮಧ್ಯದಲ್ಲಿಯೇ ಬೆಳೆದವರು. ಜನರ ಕಷ್ಟ ಸುಖಗಳನ್ನು ಅರಿತವರಾಗಿದ್ದರು. ಹಾಗಾಗಿಯೇ ಬದುಕಿನ ತಲ್ಲಣಗಳ ಬಗ್ಗೆ, ಸಮಾಜದ ಸಮಸ್ಯೆಗಳ ಬಗ್ಗೆ ಅರಿವನ್ನು ಹೊಂದಿ ಆ ಬಗ್ಗೆ ತಮಗಿರುವ ಕಾಳಜಿಯನ್ನು ಪ್ರಸಂಗದಲ್ಲಿ ಪ್ರಜ್ಞಾಪೂರ್ವಕವಾಗಿ ವಿಶದವಾಗಿ ಅಳವಡಿಸಿರುವುದನ್ನು ಕಾಣಬಹುದಾಗಿದೆ. ಇವರುಗಳು ಯಕ್ಷ ಸಾಹಿತ್ಯವನ್ನು ಬಳಸಿ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದು ಮಾತ್ರವಲ್ಲದೇ ಅದನ್ನು ಸಮಾಜದಲ್ಲಿ ಬೆಳೆಸಿರುವುದನ್ನು ಕಾಣಬಹುದಾಗಿದೆ.

ಯಕ್ಷಗಾನವೆಂದರೆ ನೆನಪಾಗುವುದು ಕರಾವಳಿ ಮಲೆನಾಡಿನ ಸಾಂಸ್ಕೃತಿಕ ವೈಭವ. ಸಾಮಾನ್ಯರ ಗ್ರಹಿಕೆಯಲ್ಲಿ ಇದು ಕೇವಲ ಆ ಪ್ರದೇಶಕ್ಕೆ ಮಾತ್ರ ಸೀಮಿತ ಅಂತ ಭಾವಿಸುತ್ತೇವೆ. ಆದರೆ ಅದು ಇಡೀ ಕರ್ನಾಟಕದಲ್ಲಿ ವ್ಯಾಪಿಸುತ್ತಾ ಅನ್ನೋದನ್ನ ಇತಿಹಾಸಗಳು ತಿಳಿಸುತ್ತದೆ. ಯಕ್ಷಗಾನದ ಬೇರೆಬೇರೆ ಪ್ರಭೇದಗಳು ಸುಮಾರು ೨೩ ಜಿಲ್ಲೆಗಳಲ್ಲಿ ತನ್ನ ವ್ಯಾಪ್ತಿಯನ್ನು ಹೊಂದಿದೆ. ಹಳೆಯ ಮೈಸೂರು ಭಾಗದಲ್ಲಿ ಮೂಡಲಪಾಯ, ಬಯಲುಸೀಮೆಯಲ್ಲಿ ಬಯಲಾಟ, ದೊಡ್ಡಾಟ ಉತ್ತರ ಕರ್ನಾಟಕದಲ್ಲಿ, ಸಣ್ಣಾಟ ದಾಸರಾಟ ಕೃಷ್ಣ ಪಾರಿಜಾತ ಗಳು ಇಂದಿಗೂ ಪ್ರಶಸ್ತಿ ಪ್ರಚಲಿತದಲ್ಲಿದೆ. ಮೇಲ್ನೋಟಕ್ಕೆ ಇದು ಹಳ್ಳಿಗರ ಕಲೆ, ಗ್ರಾಮೀಣ ಕಲೆ ಎಂದು ಪರಿ ಭಾವಿಸಲಾಗುತ್ತದೆ. ವಿದ್ಯಾವಂತರು ಅಥವಾ ನಗರವಾಸಿಗಳು ಈ ಕಲೆಯನ್ನ ಸ್ವೀಕರಿಸುವುದಕ್ಕೆ ಸಾಧ್ಯವೆ ಎಂಬ ಪ್ರಶ್ನೆಗಳು ಉದ್ಭವಿಸಬಹುದು. ಆದರೆ ಶತಮಾನಗಳ ಹಿಂದೆ ಡಾ.ಶಿವರಾಮ ಕಾರಂತ ಮುಂತಾದಂತಹ ವಿದ್ವಾಂಸರು ಕಲೆಯನ್ನು ಸಾಂಪ್ರದಾಯಿಕ, ಶಾಸ್ತ್ರೀಯ ನೆಲೆಗಟ್ಟಿನಲ್ಲಿ ನೋಡಿದ್ದರಿಂದ ಅನೇಕ ವಿದ್ವಾಂಸರು, ವಿದ್ಯಾವಂತರ ಪ್ರವೇಶವಾಯಿತು. ಅವರು ಈ ಕಲೆಯನ್ನು ಮುಕ್ತ ಮನಸ್ಸಿನಿಂದ ಸ್ವೀಕರಿಸಿ ತಮ್ಮ ಬದುಕಿನ ಭಾಗವಾಗಿಸಿಕೊಂಡು ಮುಂದುವರೆದಿದ್ದಾರೆ. *(ಮುಂದಿನ ಸಂಚಿಕೆಯಲ್ಲಿ ಮುಂದುವರೆಯುವುದು......)*

## ಧೀರ ಕಲೆಯೊಳಗೆ ಕೀರವಾಣಿಯರು – ೦೯

**ಗಾಂಭೀರ್ಯದ ಕಿರೀಟ ವೇಷಧಾರಿ – ಶ್ರೀಮತಿ ಮಾಲತಿ ವೆಂಕಟೇಶ್ ರಾವ್**

ಮಹಿಳಾ ಯಕ್ಷಗಾನವೆಂದರೆ ಅಪಸ್ವರವೆತ್ತುವವರೇ ಹೆಚ್ಚು. ಇಂದು ಅವಕಾಶಗಳು ಹೇರಳವಾಗಿ ಸಿಗುತ್ತಿದ್ದರೂ ಪ್ರೋತ್ಸಾಹಿಸಿ, ನೀರೆರೆದು ಬೆಳೆಸುವವರು ಕಡಿಮೆಯೇ ಎನ್ನಬಹುದು. ಮಹಿಳಾ ಕಲಾವಿದರು ಸಮರ್ಥ ಪಾತ್ರಧಾರಿಗಳಾಗುವಲ್ಲಿ ಸೋಲುತ್ತಾರೆ ಎನ್ನುವವರು ಅನೇಕರು. ಇದಕ್ಕೆ ಮುಖ್ಯ ಕಾರಣವೆಂದರೆ ಮಹಿಳಾ ಕಲಾವಿದರ ಸ್ವರಭಾರ. ಎಷ್ಟೇ ಸಮರ್ಥವಾಗಿ ರಂಗದಲ್ಲಿ ಕುಣಿದರೂ, ಅಭಿನಯಿಸಿದರೂ ಮಾತು ಆರಂಭಿಸುವಾಗಲೇ ಪಾತ್ರದ ಘನತೆ ಇಳಿಯುತ್ತದೆ ಎನ್ನುತ್ತಾರೆ ಯಕ್ಷಗಾನವನ್ನು "ಗಂಡು" ಕಲೆ ಎಂದು ಲಿಂಗತ್ವದ ನೆಲೆಯಲ್ಲಿ ವಾದಿಸುವವರು. ಆದರೆ ಇದಕ್ಕೆ ಅಪವಾದವೆನ್ನುವಂತೆ ತನ್ನ ಸ್ವರದಿಂದ, ಗತ್ತು, ಗಾಂಭೀರ್ಯದ ಯಕ್ಷಗಾನದ ನಡೆಗಳಿಂದ ಉತ್ತಮ ಕಿರೀಟ ವೇಷಧಾರಿ ಎಂದು ಜನಮನ್ನಣೆಗೆ ಪಾತ್ರರಾದವರೇ ಶ್ರೀಮತಿ ಮಾಲತಿ ವೆಂಕಟೇಶ್ ರಾವ್.




ಶ್ರೀ ನಾರಾಯಣ ನಾವಡ ಹಾಗೂ ಶ್ರೀಮತಿ ಲಕ್ಷ್ಮೀ ನಾವಡ ದಂಪತಿಗಳ ಮಗಳಾಗಿ ಜನಿಸಿದ ಮಾಲತಿ ವೆಂಕಟೇಶ್ ಅವರು ಕೃಷ್ಣಾಪುರದ ಆಸುಪಾಸಿನಲ್ಲೇ ಪದವಿವರೆಗಿನ ವಿದ್ಯಾಭ್ಯಾಸದ ಜೊತೆಗೆ ನರ್ಸರಿ ಶಿಕ್ಷಕಿಯ ತರಬೇತಿಯನ್ನು ಪೂರ್ಣಗೊಳಿಸಿರುತ್ತಾರೆ. ಸುಮಾರು ಹನ್ನೆರಡು ವರ್ಷಗಳ ಕಾಲ ಸ್ಥಳೀಯ ವಿದ್ಯಾಸಂಸ್ಥೆಗಳಲ್ಲಿ ನರ್ಸರಿ ಶಿಕ್ಷಕಿಯಾಗಿ ಸೇವೆ ಸಲ್ಲಿಸಿದ ಅನುಭವ ಇವರಿಗಿದೆ. ಎಳವೆಯಿಂದಲೇ ಕಲಾವಲಯದಲ್ಲಿ ಆಸಕ್ತಿ ಹೊಂದಿದ ಇವರು ತಮ್ಮ ಹದಿನೇಳನೇ ವಯಸ್ಸಿನಲ್ಲಿ ಯಕ್ಷಗಾನ ಕ್ಷೇತ್ರಕ್ಕೆ ಕಾಲಿರಿಸಿ, ಆ ಬಳಿಕ ಹಿಂದೆ ನೋಡಿದ್ದೇ ಇಲ್ಲ. ಸುಮಾರು ಮೂವತ್ತು ವರ್ಷಗಳಿಗೂ ಮಿಕ್ಕಿದ ಅನುಭವ ಇವರಿಗೆ ಯಕ್ಷಗಾನ ಕ್ಷೇತ್ರದಲ್ಲಿದೆ. ಆರಂಭದಲ್ಲಿ ಶ್ರೀ ಗಿರೀಶ್ ನಾವಡರಲ್ಲಿ ಯಕ್ಷಗಾನದ ಹೆಜ್ಜೆಗಾರಿಕೆಯನ್ನು ಅಭ್ಯಾಸ ಮಾಡಿದ ಇವರು, ಮುಂದಕ್ಕೆ ಶ್ರೀ ಶಂಕರನಾರಾಯಣ ಮೈರ್ಪಾಡಿಯವರಲ್ಲಿಯೂ ಯಕ್ಷಗಾನವನ್ನು ಕಲಿತರು. ಶ್ರೀ ಸಿದ್ಧಿವಿನಾಯಕ ಯಕ್ಷಗಾನ ಮಂಡಳಿಯ ಮೂಲಕ ರಂಗಪ್ರವೇಶ ಮಾಡಿ, ಮುಂದಕ್ಕೆ ಪೂರ್ಣಿಮಾ ಯತೀಶ್ ರೈಯವರ ಶ್ರೀ ಮಹಾಗಣಪತಿ ಮಕ್ಕಳ ಮತ್ತು ಮಹಿಳಾ ಯಕ್ಷಗಾನ ತಂಡ, ಬಾಳ ಕಾಟಿಪಳ್ಳ, ಯಕ್ಷಾರಾಧನಾ ಕಲಾಕೇಂದ್ರ ಮಂಗಳೂರು, ಮುಂತಾದ ಅನೇಕ ತಂಡಗಳಲ್ಲಿ ಯಕ್ಷಗಾನ ಕಲಾವಿದೆಯಾಗಿ ಗುರುತಿಸಿಕೊಂಡಿದ್ದಾರೆ. ಯಕ್ಷಗಾನ ವೇಷಧಾರಿಯಾಗಿ ಮಾತ್ರವಲ್ಲದೇ ತಾಳಮದ್ದಳೆ ಕ್ಷೇತ್ರದಲ್ಲಿ ಅರ್ಥಧಾರಿಯಾಗಿಯೂ ಅನೇಕ ವೇದಿಕೆಗಳಲ್ಲಿ ಕಾಣಿಸಿಕೊಂಡು ಸೈ ಎನಿಸಿಕೊಂಡಿದ್ದಾರೆ.



ತೆಂಕುತಿಟ್ಟಿನ ಕಲಾವಿದೆಯಾಗಿರುವ ಇವರು ಕಿರೀಟ ವೇಷಗಳಲ್ಲಿ ವಿಶೇಷವಾಗಿ ಆಸಕ್ತರು ಹಾಗೂ ಅದರಲ್ಲೇ ಹೆಸರು ಪಡಕೊಂಡವರು. ಇವರ ಹೆಸರನ್ನು ಉತ್ತುಂಗಕ್ಕೇರಿಸಿದ ಪ್ರಮುಖ ಪಾತ್ರವೆಂದರೆ 'ಶ್ರೀ ದೇವಿ ಮಹಾತ್ಮೆ' ಪ್ರಸಂಗದ ರಕ್ತಬೀಜನ ಪಾತ್ರ. ಈ ಪಾತ್ರವನ್ನು ಕಂಡು ದಿ.ಸಂಪಾಜೆ ಶೀನಪ್ಪ ರೈಯವರೇ ಖುದ್ದಾಗಿ ಫೋನಾಯಿಸಿ ಇವರ ಪಾತ್ರ ನಿರ್ವಹಣೆಯನ್ನು ಹೊಗಳಿದ್ದರು. ಇವರ ವೇಷದ ನಡೆಯನ್ನು ಗಮನಿಸಿ ಮೆಚ್ಚಿಕೊಂಡ ಎಡನೀರು ಹಿರಿಯ ಶ್ರೀಗಳು "ನೀನು ನಮ್ಮ ಮೇಳಕ್ಕೆ ಸೇರು" ಎಂದಿದ್ದರಂತೆ. ಹೀಗೆ ಅನೇಕ ಹಿರಿಯ, ಅನುಭವಿ ಕಲಾವಿದರಿಂದ ಮೆಚ್ಚುಗೆ ಪಡಕೊಂಡ ಹೆಗ್ಗಳಿಕೆ ಇವರದ್ದಾಗಿದೆ.

ಇವರ ಸ್ವರಭಾರದಿಂದಾಗಿ ಯಕ್ಷಗಾನವನ್ನು ವೀಕ್ಷಿಸುವುದಕ್ಕೆ ಬಂದವರು ಮಹಿಳಾ ತಂಡದಲ್ಲಿರುವ ಹುಡುಗ ಯಾರು ಎಂದು ವಿಚಾರಿಸಿದ್ದರಂತೆ. "ವೀರ ಬಭ್ರುವಾಹನ"ದ ಅರ್ಜುನ ಇವರು ಮಾಡಿದ ಮೊದಲ ವೇಷ. ಆ ಬಳಿಕ ಸುಮಾರು ಐನೂರಕ್ಕೂ ಹೆಚ್ಚಿನ ಪಾತ್ರಗಳನ್ನು ದೇಶದಾದ್ಯಂತ ವಿವಿಧ ವೇದಿಕೆಗಳಲ್ಲಿ



ನಿರ್ವಹಿಸಿದ್ದಾರೆ. 'ಶ್ರೀ ದೇವಿ ಮಹಾತ್ಮೆ'ಯ ಮಧು–ಕೈಟಭ, ವಿದ್ಯುನ್ಮಾಲಿ, ರಕ್ತಬೀಜ, ವೀರಮಣಿ ಕಾಳಗದ ವೀರಮಣಿ, ಜಾಂಬವತೀ ಕಲ್ಯಾಣದ ಬಲರಾಮ, ರತಿ ಕಲ್ಯಾಣದ ಕೌಂಡ್ಲಿಕ, ಪಾಂಚಜನ್ಯದ ಪಂಚಜನ, ದಕ್ಷಾಧ್ವರದ ದಕ್ಷ, ಸುದರ್ಶನ ವಿಜಯದ ಶತ್ರುಪ್ರಸೂದನ, ಅಗ್ರಪೂಜೆಯ ಶಿಶುಪಾಲ ಹೀಗೆ ಅನೇಕ ಪಾತ್ರಗಳನ್ನು ನಿರ್ವಹಿಸಿದ್ದಾರೆ. ಪುಂಡು ವೇಷವಾದ ಮಾರ್ತಾಂಡತೇಜನ ಪಾತ್ರವನ್ನೂ ಮಾಡಿದ್ದಾರೆ. ಇವರ ಮಾತಿನ ಧಾಟಿ, ವೇಷದ ಗತ್ತು, ಇವರು ನಿರ್ವಹಿಸುವ ಪಾತ್ರದ ಔನ್ನತ್ಯವನ್ನು ಎತ್ತಿ ಹಿಡಿದಿವೆ.



ಸಾಯಿಸುಮಾ ಎಂ. ನಾವಡ

ಇವರ ಯಕ್ಷಗಾನ ಕಲಾಸೇವೆಯನ್ನು ಗುರುತಿಸಿ ಯಕ್ಷಧ್ರುವ ಪಟ್ಲ ಫೌಂಡೇಶನ್ ನವರು "ಯಕ್ಷ ಧ್ರುವ ಕಲಾ ಗೌರವ"ವನ್ನು ನೀಡಿರುತ್ತಾರೆ. ಹಾಗೂ ಅನೇಕ ಸಂಘ–ಸಂಸತೆಗಳು ಇವರ ಕಲಾಸೇವೆಯನ್ನು ಗುರುತಿಸಿ, ಗೌರವಿಸಿವೆ. ತಾನು ಯಕ್ಷಗಾನ ಕ್ಷೇತ್ರದಲ್ಲಿ ತೊಡಗಿಸಿಕೊಂಡದ್ದು ಮಾತ್ರವಲ್ಲದೇ ತಮ್ಮ ಏಕೈಕ ಪುತ್ರಿಯಾಗಿರುವ ಕೃತಿ ವಿ. ರಾವ್ ಇವರನ್ನು ತೊಡಗಿಸಿಕೊಳ್ಳುವಂತೆ ಮಾಡಿದ್ದಾರೆ. ಆಕೆಯೂ ತಾಯಿಯಂತೆ ಯಕ್ಷಗಾನ ಕ್ಷೇತ್ರದಲ್ಲಿ ಬೆಳೆಯುತ್ತಿದ್ದಾರೆ. ಮಾಲತಿ ವೆಂಕಟೇಶ್ ಅವರ ಕಲಾಜೀವನ ಇನ್ನಷ್ಟು ಬೆಳಗಲಿ ಎಂಬ ಆಶಯ ನಮ್ಮದು.

## ಕಾಡುವ ಪಾತ್ರ/ ಪ್ರಸಂಗ/ ಸನ್ನಿವೇಶ

ಕಲಾವಿದರ ಯಕ್ಷಾನುಭವದ ಪ್ರಮುಖ ನೆನಪು/ಘಟನೆಗಳನ್ನು ದಾಖಲೀಕರಿಸುವ ಅಂಕಣ ಇದು. ಪ್ರತೀ ಸಂಚಿಕೆಯಲ್ಲಿ ಇಬ್ಬರು ಕಲಾವಿದರ ಅನುಭವಗಳನ್ನು ಇಲ್ಲಿ ಸಾದರಪಡಿಸುತ್ತಿದ್ದೇವೆ. ಈ ತಿಂಗಳ ಸಂಚಿಕೆಯಲ್ಲಿ ಕಲಾವಿದರಾದ ***ಪೂಕಳ ಲಕ್ಷ್ಮೀ ನಾರಾಯಣ ಭಟ್*** ಹಾಗೂ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ***ಎಂಎ ನಾಯಕ್ ಮಂದಾರ್ತಿ*** ರವರ ಅನುಭವಗಳ ತುಣುಕು ಪ್ರಕಟವಾಗಿದೆ.



ಕಲಾವಿದರು: ಎಂಎ ನಾಯಕ್ ಮಂದಾರ್ತಿ

ಜನ್ಮ ದಿನಾಂಕ: 14-2-1952

ತಂದೆ: ಕರಿಯ ಮರಕಾಲ

ತಾಯಿ: ಬುಡ್ಡು ಮಾರಕಾಲತಿ

ಗುರುಗಳು: ನಾರ್ಣಪ್ಪ ಉಪ್ಪೂರು

ವಿದ್ಯಾಭ್ಯಾಸ: 6ನೆ ತರಗತಿ

ಧರ್ಮಪತ್ನಿ: ಗುಲಾಬಿ ಮರಕಾಲ್ತಿ

ಯಕ್ಷಗಾನ ಸೇವೆ ಪ್ರಾರಂಭಿಸಿದ ವರ್ಷ: 1964-65 ರಲ್ಲಿ ಅಮೃತೇಶ್ವರಿ ಮೇಳ

ಸೇವೆ ಸಲ್ಲಿಸಿದ ಮೇಳಗಳು: ಅಮೃತೇಶ್ವರಿ ಮಂದಾರ್ತಿ ಶಿರಸಿ ಮಾರಿಕಾಂಬ ಇಡಗುಂಜಿ

ಮೆಚ್ಚಿ ಪಾತ್ರಗಳು: ಸುಮಗಂಧಿ, ರಾಜಾ ಬೃಹದ್ರತ ಪ್ರಸಂಗದ ಕಲಾವತಿಯ ಪಾತ್ರ, ಚಿರಕನ್ನಿಕಾ, ಮಾಯಾ ಮೃಗಾವತಿಯ ಮೃಗಾವತಿ, ಸುಧನ್ವಾರ್ಜುನದ ಪ್ರಭಾವತಿ ದ್ರೌಪತಿ ಸೈರಂಧ್ರಿ, ಚಂದ್ರಾವಳಿ, ರಾಮಾಂಜನೇಯದ ಸೀತೆ, ಲಂಕಾದಹನ ಸೀತೆ ರುಕ್ಮಾಂಗದ ಮೋಹಿನಿ ಪ್ರಸಂಗದ ಮೋಹಿನಿ

2022ನೇ ಸಾಲಿನ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಎಂಎ ನಾಯಕ್ ಮಂದಾರ್ತಿ ಯಕ್ಷಗಾನದ ಅಗ್ರಗಣ್ಯ ಸ್ತ್ರೀ ವೇಷಧಾರಿಗಳು. 42 ವರ್ಷಗಳ ಕಾಲ ಯಕ್ಷಗಾನ ಕ್ಷೇತ್ರದಲ್ಲಿ ನಿಷ್ಟೆ ಶ್ರದ್ಧೆ ಪ್ರಾಮಾಣಿಕತೆಯಿಂದ ಸೇವೆ ಸಲ್ಲಿಸಿರುವುದಕ್ಕೆ ದೇವರು ನೀಡಿದ ಫಲ ಎಂದು ಭಾವಿಸುತ್ತೇನೆ ಎಂದು ಅವರು ಸಂತೋಷ ವ್ಯಕ್ತ ಪಡಿಸುತ್ತಾರೆ.

***ಪ್ರಶ್ನೆ: ನಿಮ್ಮ ಪಾತ್ರದ ವಿಶೇಷತೆ ಬಗ್ಗೆ ನಿಮ್ಮ ಅನಿಸಿಕೆ ಏನು? ರಂಗದ ಮೇಲೆ ಪ್ರದರ್ಶನಕ್ಕೆ ಹೇಗೆ ತಯಾರಿ ಮಾಡಿಕೊಳ್ಳುತ್ತೀರಿ?***

***ಎಂಎ ನಾಯಕ್:*** ನಾನು ಅನೇಕರ ಸ್ತ್ರೀ ವೇಷವನ್ನು ನೋಡಿದ್ದೇನೆ. ಅದರಿಂದ ಪಾಠ ಕಲಿತಿದ್ದೇನೆ. ನನ್ನ ಸ್ತ್ರೀ ವೇಷವನ್ನು ಅನೇಕರು ಮೆಚ್ಚಿಕೊಂಡಿದ್ದಾರೆ. ಅದಕ್ಕೆ ಕಾರಣ ನಾನು ಬಳಸುವಂತಹಾ ಭಾಷೆ. ನನ್ನ ವಾಕ್ಯ ಸರಣಿಯೇ ಪ್ರತ್ಯೇಕ., ನನ್ನ ವೇಷದ ಪೀಠಿಕೆಯೇ ಬೇರೆ, ನಾನು ಅನೇಕ ಸ್ತ್ರೀ ವೇಷಧಾರಿಗಳಿಂದ ಕಲಿತಿದ್ದೇನೆ. ಹಿಂದಿನವರು ಮಾಡಿದ್ದನ್ನು ನಾನು ಅನುಕರಣೆ ಮಾಡುವುದಿಲ್ಲ, ನನ್ನ ಪ್ರಸ್ತುತಿಯೇ ಬೇರೆ ರೀತಿಯದ್ದಾಗಿರುತ್ತದೆ. ಅದು ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ. ಇದರಿಂದಾಗಿಯೇ ೪೨ ವರ್ಷಗಳ ಕಾಲ ತಿರುಗಾಟ ನಡೆಸಿ ಹೆಸರು ಗಳಿಸಲು ಸಾಧ್ಯವಾಯಿತು. ಯಾವುದೇ ಕಲಾವಿದನಾಗಲಿ ಸ್ವಂತಿಕೆಯನ್ನು ಬೆಳೆಸಿಕೊಳ್ಳಬೇಕು. ಪುಸ್ತಕ ಓದಿದಾಗ ಒಳ್ಳೆ ವಾಕ್ಯಗಳು ಸಿಗುತ್ತವೆ ಅವುಗಳನ್ನು ಮನನ ಮಾಡಿಕೊಳ್ಳಬೇಕು ಸಂದರ್ಭ ಬಂದಾಗ ಉಪಯೋಗಿಸಿಕೊಳ್ಳಬೇಕು. ಅಭ್ಯಾಸ ಮಾಡಬೇಕು. ಪುಸ್ತಕ ಓದುವವರ ಸಂಖ್ಯೆ ಕಡಿಮೆ ಆಗಿದೆ. ಹಿಂದಿನ ಕಾಲದಲ್ಲಿ ನವು ಯಕ್ಷಗಾನ ಪ್ರದರ್ಶನ ಮುಗಿದ ಮೇಲೆ ಬಿಡಾರದಲ್ಲೇ ಇರ್ಬೇಕಿತ್ತು. ಮನೆಗೆ ತೆರಳಲು ವ್ಯವಸ್ಥೆ ಇರಲಿಲ್ಲ. ಮದ್ಯಾಹ್ನ ಹೊತ್ತಿನಲ್ಲಿ ಪುಸ್ತಕ ಓದುತ್ತಿದ್ದೆವು.

13ನೇ ವರ್ಷದಲ್ಲಿ ನಾನು ಮೊದಲು ಅಮೃತೇಶ್ವರಿ ಮೇಳಕ್ಕೆ ಸೇರಿದೆ. ಅದು ಬಯಲಾಟದ ಮೇಳ. ಅಲ್ಲಿ ಕಷ್ಟದ ಪರಿಸ್ಥಿತಿ ಇತ್ತು. ಮಂದಾರ್ತಿಯ ಹಳ್ಳಿಯಲ್ಲಿ ಹುಟ್ಟು ಬೆಳೆದದ್ದರಿಂದ ಮಂದಾರ್ತಿ ಮೇಳದ ಆಟವನ್ನು ನೋಡಿಕೊಂಡೇ ಬೆಳೆದೆ. ಆಗ ಆ ಮೇಳದಲ್ಲಿ ಒಳ್ಳೆಯ ಕಲಾವಿದರಿದ್ದರು. ವೀರಭದ್ರ ನಾಯಕ, ಶಿರಿಯಾರ ಮಂಜು ನಾಯ್ಕ ಮೊದಲಾದ ಕಲಾವಿದರ ತಂಡವಿತ್ತು. ಆಗೆಲ್ಲ ಊರ ಸುತ್ತಮುತ್ತಲು ಒಂದೂ ಆಟವನ್ನು ಬಿಡದೆ ನೋಡುತ್ತಿದ್ದೆವು. ಮರುದಿವಸ ಶಾಲೆಗೆ ಹೋಗುತ್ತಿದ್ದೆವು. ಹೀಗೆ ಯಕ್ಷಗಾನದ ಹುಚ್ಚು ಸಹಜವಾಗಿ ಬೆಳೆಯಿತು. 13ನೇ ವಯಸ್ಸಿಗೆ ಅಮೃತೇಶ್ವರಿ ಮೇಳಕ್ಕೆ ಹಿರಿಯ ಗಾಣಿಗ ಕರೆದುಕೊಂಡು ಹೋದರು. ಆಗ ಹೇರಂಜಾಲು ವೆಂಟಕರಮಣ ಗಾಣಿಗರು  ಹೇರಂಜಾಲು ಸುಬ್ಬಣ್ಣ ಗಾಣಿಗರು ಇದ್ದಂತಹಾ ಮೇಳಕ್ಕೆ ಸೇರ್ಪಡೆಯಾದೆ.

ಅಮೃತೇಶ್ವರಿ ಮೇಳದಲ್ಲಿ ಆರಂಭದಲ್ಲಿ ಬಾಲಗೋಪಾಲ ಒಡ್ಡೋಲಗ ಮಾಡ್ತಿದ್ದೆ, ಅದೇ ಮೇಳದಲ್ಲಿ ಚಿಟ್ಟಾಣಿ, ಗೋಡೆ, ನಗರ ಜಗನ್ನಾಥ್ ಶೆಟ್ಟಿ, ಜೋಶಿ ಹಳದಿಪುರ ಗಜಾನನ ಭಂಡಾರಿ, ನಾರ್ಣಪ್ಪ ಉಪ್ಪೂರು ತಿಮ್ಮಪ್ಪ ನಾಯಕ್, ಮೊದಲಾದ ಪ್ರಖ್ಯಾತ ಕಲಾವಿದರಿದ್ದರು. ಒಂದೊಮ್ಮೆ ಪೀಠಿಕೆ ಸ್ತ್ರೀ ವೇಷದವರು ರಜೆ ಮಾಡಿದಾಗ ನನಗೆ ಆ ಸ್ತ್ರೀ ವೇಷ ಮಾಡುವ ಅವಕಾಶ ಬಂದೊದಗಿತು. ಅದಾದ ಮೇಲೆ ನನ್ನ ಸ್ತ್ರೀ ವೇಷವನ್ನು ಮೆಚ್ಚಿ ಖಾಯಂ ಆಗಿ ಸ್ತ್ರೀ ವೇಷ ಮಾಡಲು ಮೇನೇಜರ್ ಹೇಳಿದರು. ಅಂದಿನಿಂದ ಸ್ತ್ರೀ ಪಾತ್ರಗಳು ನನಗೆ ಖಾಯಂ ಆಯಿತು. ಸಖಿ ಪಾತ್ರಗಳನ್ನು ನಾನು ಚುರುಕಾಗಿ ಮಾಡುತ್ತಿದ್ದೆ. ನನ್ನ ಚುರುಕುತನ ಕಂಡು ಹಂದೆಯವರ್ನ್ನಾಗ ಮುಖ್ಯ ಸ್ತ್ರೀ ವೇಷದಾರಿಯಾಗಿದ್ದ ಕೋಟ ವೈಕುಂಠ ನಾಯಕರು ಧರ್ಮಸ್ಥಳ ಮೇಳಕ್ಕೆ ಹೋದಾಗ ನನ್ನನ್ನು ಮುಖ್ಯ ಸ್ತ್ರೀ ವೇಷದ ಸಾಲಿನಲ್ಲಿ ಕುಳ್ಳಿರಿಸಿದ್ರು. ದೊಡ್ಡ ದೊಡ್ಡ ಕಲಾವಿದರೆದುರು ನಾನು ಸ್ತ್ರೀ ವೇಷವನ್ನು ನಿರ್ವಹಿಸಬೇಕಾಗಿ ಬಂತು. ಆಗ ಯಕ್ಷಲೋಕ ವಿಜಯದ ನನ್ನ ಸುಮಗಂಧಿಯ ಪಾತ್ರ ಬಹಳ ಪ್ರಖ್ಯಾತವಾಯಿತು.

***ಪ್ರಭಾವ ಬೀರಿದ ಕಲಾವಿದರು***

***ಎಂಎ ನಾಯಕ್:*** ನನ್ನ ಪಾತ್ರ ನಿರ್ವಹಣೆಯ ಮೇಲೆ ಕೋಟ ವೈಕುಂಠ ನಾಯಕರು ತುಂಬ ಪ್ರಭಾವ ಬೀರಿದವರು. ಅವರೊಂದಿಗೆ ಬಹಳ ವರ್ಷ ತಿರುಗಾಟ ನಡೆಸಿದ್ದೇನೆ ಹಾಗೂ ಅವರಿಂದ ಬಹಳಷ್ಟು ಕಲಿತಿದ್ದೇನೆ. ಸಾತ್ವಿಕ ವೇಷವನ್ನು ಮಾಡುವುದರಲ್ಲಿ ಎತ್ತಿದ ಕೈ ಅವರು. ಶುದ್ಧ ನಡೆ. ಹೆಜ್ಜೆಗಾರಿಕೆ ಮಾತುಕತೆ ಎಲ್ಲವೂ ಹಿತಮಿತ. ಅವರು ಧರ್ಮಸ್ಥಳ ಮೇಳಕ್ಕೆ ಹೋದಾಗ ಹಾರಾಡಿ ನಾರಾಯಣ ಗಾಣಿಗರು ಒಂದು ವರ್ಷ ತಿರುಗಾಟಕ್ಕೆ ಬಂದಿದ್ದರು. ಅವರಿಂದಲೂ ಸುಮಾರು ವಿಚಾರಗಳನ್ನು ಕಲಿತಿದ್ದೇನೆ. ತೆಂಕಿನಲ್ಲಿ ಕೋಳ್ಯೂರು ರಾಮಚಂದ್ರ ರಾಯರ ವೇಷಗಳನ್ನು ಬಹಳ ಮೆಚ್ಚಿಕೊಂಡಿದ್ದೇನೆ. ಎನ್ನುತ್ತಾರೆ.

ಕಾಲ ಬದಲಾದ ಹಾಗೆ ಬದಲಾವಣೆ ಸಹಜ. ನಮ್ಮ ಕಾಲದಲ್ಲಿಯೇ ಬದಲಾವಣೆ ನಡೆದಿವೆ. ಶಿರೋಭೂಷಣ ಮೊದಲು ಇರಲಿಲ್ಲ, ನಂತರ ಅದು ಬಂತು. ಅದರ ಬಗ್ಗೆ ಆಕ್ಷೇಪ ಎತ್ತಿದವರೂ ಇದ್ದಾರೆ.  ಇನ್ನು ಆಟ ಕಾಂಬರಿಲ್ಲ, ಕಲೆ ನಾಶ ಆಯ್ತು ಎಂಬ ಮಾತು ಕೇಳಿ ಬರುತ್ತಿತ್ತು. ಈಗ ಅದೇ ಕಲೆ ಬೆಳೆದು ದೇಶ ವಿದೇಶದಲ್ಲಿ ವ್ಯಾಪಿಸಿ ನಿಂತಿದೆ. ಆದರೆ ಕೆಲವೊಂದು ಅತಿರೇಕದ ಬದಲಾವಣೆಗಳೂ ನಡೆದಿದೆ. ಉದಾಹರಣೆಗೆ ಭಸ್ಮಾಸುರ ಮೋಹಿನಿ ಪ್ರಸಂಗದಲ್ಲಿ ಮೋಹಿನಿ ಕುಣಿಯುವುದು ಸರಿ. ಅದೇ ಪಾರ್ವತಿ ಹಾಗೂ ಈಶ್ವರ ಪಾತ್ರ ಮಾಡಿದ ವ್ಯಕ್ತಿಯೂ ಮಿತಿ ಮೀರಿ ಕುಣಿದಾಗ ಅದಕ್ಕೆ ಅರ್ಥ ಇರುವುದಿಲ್ಲ ಎನ್ನುವುದು ಅವರ ಉವಾಚ.

***ಕಲಾವಿದರು: ಪೂಕಳ ಲಕ್ಷ್ಮೀ ನಾರಾಯಣ ಭಟ್***

***ಧರ್ಮಪತ್ನಿ: ಸುಷ್ಮಾ***

***ಜನ್ಮ ದಿನಾಂಕ: ೧೨-೧೧-೧೯೫೧***


***ತಂದೆ: ಪೂಕಳ ಕೃಷ್ಣ ಭಟ್***

***ತಾಯಿ: ಶಂಕರಿಯಮ್ಮ***

***ಯಕ್ಷಗಾನದ ಗುರುಗಳು: ನಾಟ್ಯಕ್ಕೆ. ದಿ. ಉಪ್ಪಳ ಕೃಷ್ಣ ಮಾಸ್ಟರ್ ಗುರುಗಳು ಹಾಗೂ ಅರ್ಥಗಾರಿಕೆಗೆ ಕೇಶವ ಭಟ್ ಗುರುಗಳು.***

***ಸೇವೆ ಸಲ್ಲಿಸಿದ ಮೇಳಗಳು: ಇರಾ ಸೋಮನಾಥೇಶ್ವರ ಕುಂಡಾವು, ಪುತ್ತೂರು ಮೇಳ, ಕಟೀಲು ಮೇಳ, ಸುರತ್ಕಲ್, ಕರ್ನಾಟಕ ಮೇಳ***

ತೆಂಕು ತಿಟ್ಟಿನ ಪ್ರಬುದ್ಧ ಅರ್ಥಧಾರಿ, ವೇಷಧಾರಿಯಾಗಿ ಮೆರೆದ ಹಿರಿಯ ಕಲಾವಿದರಾದ ಪೂಕಳ ಲಕ್ಷ್ಮಿ ನಾರಾಯಣ್ ಭಟ್ ರವರು ಈಗಿನ ಕಾಸರಗೋಡು ಜಿಲ್ಲೆಯ ಪೂಕಳ ಎಂಬ ಗ್ರಾಮದವರು. ಕೌಟುಂಬಿಕವಾಗಿ ಯಕ್ಷಗಾನದ ಹಿನ್ನಲೆಯನ್ನು ಹೊಂದಿರುವ ಇವರ ಅಜ್ಜ ಒಳ್ಳೆಯ ಅರ್ಥಧಾರಿಗಳಾಗಿದ್ದರು. ದೊಡ್ಡಪ್ಪ ಪೂಕಳ ವೆಂಕಟರಮಣ ಭಟ್, ಮಧು ಭಟ್ ಅರ್ಥಧಾರಿ ಹಾಗೂ ವೇಷಧಾರಿಯಾಗಿ ಹೆಸರು ಪಡೆದವರು. ಇವರ



ಮಾತೃಶ್ರೀಯವರ ತಂದೆಯಾದ ಎಡಕಾನ ಕೇಶವ್ ಭಟ್ ಕೂಡಾ ಉತ್ತಮ ವೇಷಧಾರಿಗಳಾಗಿದ್ದರು. ಹೆಸರಾಂತ ಕಲಾವಿದ ಕುರಿಯ ವಿಠಲ ಶಾಸ್ತ್ರಿಯವರು ಇವರ ತಂದೆಯವರ ಸೋದರ ಅತ್ತೆಯ ಮಗ. ಈ ಎಲ್ಲ ಹಿನ್ನಲೆಯಿಂದ ಲಕ್ಷ್ಮೀ ನಾರಾಯಣ ಭಟ್ ರವರಿಗೂ ಯಕ್ಷಗಾನದ ಬಗ್ಗೆ ಆಸಕ್ತಿ ಮೂಡಲು ಕಾರಣವಾಯಿತು. ಇವರ ಬಾಲ್ಯದ ದಿನಗಳಲ್ಲಿ ಯಕ್ಷಗಾನವೇ ಸಾಂಸ್ಕೃತಿಕ ಮನರಂಜನೆಯ ಮಾಧ್ಯಮವಾಗಿದ್ದು ಶಾಲಾ ವಿದ್ಯಾಭ್ಯಾಸದ ಸಂದರ್ಭದಲ್ಲೇ ಇವರು ಪ್ರಥಮ ಬಾರಿಗೆ ವೇಷ ಕಟ್ಟಿದವರು. ಮಂಗಳೂರಿನ ಸರ್ಕಾರಿ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಗ ಅಂತರ್ ಕಾಲೇಜು ಮಟ್ಟದ ಯಕ್ಷಗಾನ ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನ ಗಿಟ್ಟಿಸಿಕೊಂಡಿದ್ದರಂತೆ. ಕಾಲೇಜು ವಿದ್ಯಾಭ್ಯಾಸ ಪೂರೈಸಿದ ಬಳಿಕ ಸಂಪೂರ್ಣವಾಗಿ ಯಕ್ಷಗಾನದಲ್ಲೇ ತೊಡಗಿಸಿಕೊಳ್ಳುತ್ತಾರೆ. ಅದಕ್ಕೆ ಕಾರಣ ಹಿಂದೆ ಇದ್ದಂತಹಾ ನಿರುದ್ಯೋಗದ ಸಮಸ್ಯೆಯೂ ಹೌದು ಎಂಬುದಾಗಿ ಹೇಳುತ್ತಾರೆ. ಪ್ರಾರಂಭದಲ್ಲಿ ಶ್ರೀಧರ ಭಂಡಾರಿಯವರ ಮಾಲಿಕತ್ವದ ಪುತ್ತೂರು ಮೇಳದಲ್ಲಿ, ಕರ್ನಾಟಕ ಸುರತ್ಕಲ್, ಕಟೀಲು ಎಡನೀಡು ಮೇಳದಲ್ಲಿ, ತಿರುಗಾಟ ನಡೆಸಿದರು.

ರಂಗದಲ್ಲಿ ಪಾತ್ರ ನಿರ್ವಹಿಸಲು ಕೇವಲ ಅಧ್ಯಯನವಷ್ಟೇ ಅಲ್ಲ ಒಂದು ಪಾತ್ರದ ಬಗ್ಗೆ ಚಿಂತನೆ ನಡೆಸಿದಾಗ ಹೊಸ ವಿಚಾರಗಳು ಹೊಳೆಯುತ್ತವೆ ಎಂದವರು ಹೇಳುತ್ತಾರೆ. ಉದಾಹರಣೆಗೆ ತರಳಾಕ್ಷಿ ಎಂಬ ಪದ ಅರ್ಥವನ್ನು ಅವರು ಗ್ರಹಿಸಿಕೊಂಡ ಬಗ್ಗೆ ತಿಳಿಸುತ್ತಾರೆ. ತರಳಾಕ್ಷಿ ಎಂಬುದು ಬರವಣಿಗೆಯ ತಪ್ಪಿನಿಂದ ಹಾಗೆ ಆಗಿರಬಹುದು ಎಂದು ಅವರು ಅಂದುಕೊಂಡಿದ್ದರಂತೆ. ಆದರೆ ತರಳ ಎಂಬ ಪದದ ಅರ್ಥ ಚಂಚಲ ಎಂಬುದಾಗಿ ಎಂಬುದು ಚಿಂತನೆ ನಡೆಸಿದಾಗ ತಿಳಿದುಕೊಂಡೆ ಎಂದು ಅವರು ಹೇಳುತ್ತಾರೆ. ಪ್ರಸಂಗದ ಒಳಗೆ, ಪಾತ್ರದ ಒಳಹೊಕ್ಕು ಚಿಂತನೆ ಮಾಡಿಕೊಂಡಿದ್ರೆ ಹೊಸ ಹೊಸ ವಿಚಾರಗಳು ಹೊಳೆಯುತ್ತವೆ. ಎಂದವರ ಅಂಬೋಣ

***ಮಾಧ್ಯಮದಲ್ಲಿ ಉಂಟಾಗುವ ವಿವಾದಗಳ ಬಗ್ಗೆ ಮತ್ತು ಯಕ್ಷಗಾನದ ಬದಲಾವಣೆಗಳ ಅವರು ಹೇಳುವುದೇನೆಂದರೆ*** –



ಮಾಧ್ಯಮವನ್ನು ಬಳಸಿಕೊಳ್ಳುವ ವಿಧಾನ ಸರಿಯಾಗಿಲ್ಲ ಎಂದು ನನ್ನ ಅನಿಸಿಕೆ. ತಂತಜ್ಞಾನ ಬೆಳೆದಾಗ ಮನುಷ್ಯನ ಜೀವನ ಬದಲಾಗುವುದು ಸಹಜ. ಮನುಷ್ಯ ಅದಕ್ಕೆ ಹೊಂದಿಕೊಳ್ಳಬೇಕು. ಆದರೆ ತಾಂತ್ರಿಕ ಬೆಳವಣಿಗೆಯಿಂದದುಷ್ಪರಿಣಾಮಗಳೂ ಆಗುತ್ತವೆ. ಹರಿತವಾಗ ಕತ್ತಿ ವೈದ್ಯನ ಕೈಗೆ ಸಿಕ್ಕಿದ್ರೆ ಪ್ರಾಣ ಉಳಿಯುತ್ತದೆ. ಹಾಗೂ ಕಟುಕನ ಕೈಗೆ ಸಿಕ್ಕಿದ್ರೆ ಕೊಲೆಯಾಗುತ್ತದೆ. ಹಾಗೆಯೇ ಈ ಸಾಮಾಜಿಕ ಮಾಧ್ಯಮಗಳು.

ಯಕ್ಷಗಾನದಲ್ಲಿ ಇತರ ಕಲೆಗಳಂತೆ ಬದಲಾವಣೆಗಳು ಸ್ವಾಭಾವಿಕ. ಆದ್ರೆ ಬದಲಾವಣೆಗಳು ಸ್ವೀಕಾರಕ್ಕೆ ಯೋಗ್ಯವಾಗಿರಬೇಕು. ಯಕ್ಷಗಾನದ ಮೂಲ ಸ್ವರೂಪಕ್ಕೆ ಧಕ್ಕೆಯಾಗದ ಹಾಗೆ ವ್ಯವಹರಿಸಬೇಕು. ಎಂದವರು ಹೇಳುತ್ತಾರೆ.

***ತಾಳಮದ್ದಳೆ ಕ್ಷೇತ್ರದಲ್ಲಿ...***

ತಾಳಮದ್ದಳೆ ಕ್ಷೇತ್ರದಲ್ಲಿ ನಾನು ಅರ್ಥಧಾರಿಯಾಗಿ ಗುರುತಿಸಿಕೊಳ್ಳಲು ದಿವಂಗತ ವಾಸುದೇವ ಸಾಮಗರೇ ಕಾರಣ. ಅವರೊಂದಿಗೆ ಕೆಲವು ಸಮಯ ತಿರುಗಾಟದಲ್ಲಿ ಮಾಡಿದ್ದೆ, ನಾನು ಅರ್ಥ ಹೇಳಬೇಕಾದ ವಿಧಾನ ಹೇಗೆ ಅದನ್ನು ಎಲ್ಲಿಗೆ ಮುಟ್ಟಿಸಬೇಕು ಎಂಬುದನ್ನು ಅವರಿಂದ ಅಭ್ಯಾಸ ಮಾಡಿಕೊಂಡೆ. ಅವರಿಗೆ ಋಣಿಯಾಗಿರ್ತೇನೆ. ಎನ್ನುತ್ತಾರೆ.

***ಸಹ ಕಲಾವಿದರ ಒಡನಾಟದ ಬಗ್ಗೆ***

ತಿರುಗಾಟದ ಅವಧಿಯಲ್ಲಿ ಸಹ ಕಲಾವಿದರ ಪ್ರೋತ್ಸಾಹ ಸಹಕಾರದಿಂದ ಅನೇಕ ವಿಷಯಗಳನ್ನು ತಿಳಿದುಕೊಂಡೆ. ಅಗರಿ ರಘುರಾಮ ಭಾಗವತರು, ಪದ್ಯಾಣ ಗಣಪತಿ ಭಟ್ ಹಿಮ್ಮೇಳದಲ್ಲಿ ಕಡಬ ನಾರಾಯಣ ಆಚಾರ್, ಶಿವರಾಮ್ ಜೋಗಿ ಬಿಸಿ ರೋಡ್, ಎಂಕೆ ರಮೇಶ್ ಆಚಾರ್, ತೆಕ್ಕಟ್ಟೆ ಆನಂದ ಮಾಸ್ತರ್, ಎಷ್ಟೋ ಕಲಾವಿದರ ಸಹಕಾರ ಸಿಕ್ಕಿದ ಕಾರಣ ಸುಮಾರು ಅನುಭವಗಳನ್ನು ಪಡೆದುಕೊಂಡೆ ಎಂದೆನ್ನುತ್ತಾರೆ.

ಮೊದಲಿನವರು ಬರೀ ಕಲಾವಿದರಾಗಿರಲಿಲ್ಲ. ಕಲಾಸೇವಕರಾಗಿದ್ದರು. ಈಗಿನ ಕಾಲದಲ್ಲಿ ಕಲಾವಿದರು ಇದ್ದಾರೆ. ಕಲೆ ಎನ್ನುವುದು ಒಂದು ಸಮುದ್ರ. ಒಂದು ತಂಬಿಗೆ ನೀರು ತೆಗೆದ್ರೆ ಕಮ್ಮಿಯಾಗುವುದಿಲ್ಲ. ಯಕ್ಷಗಾನ ಅಂದಿಗೆ ಇಂದಿಗೆ ನಾಳೆಯೂ ಉಳಿಯುತ್ತದೆ. ಆದರೆ ಬದಲಾವಣೆಗಳಾಗುತ್ತದೆ. ಈ ಪ್ರಪಂಚದಲ್ಲಿ ಬದಲಾವಣೆ ಸ್ವಾಭಾವಿಕ. ಸ್ವೀಕಾರಕ್ಕೆ ಯೋಗ್ಯವಾದಂತಹ ಬದಲಾವಣೆಗಳನ್ನು ಉಳಿಸಿಕೊಳ್ಳಬೇಕು, ಯೋಗ್ಯವಲ್ಲದವುಗಳನ್ನು ತಿರಸ್ಕರಿಸಬೇಕು. ಇಡಿ ರಾತ್ರಿ ನಡೆಯುತ್ತಿದ್ದ ಇದ್ದ ಯಕ್ಷಗಾನ ಕಾಲಮಿತಿಗೆ ಬಂದು ನಿಂತಿದೆ. ಅದಕ್ಕೆ ಬದಲಾದ ಜೀವನಶೈಲಿಯೂ ಕಾರಣ. ಜನರಿಗೆ ಬೇಕಾದಂತೆ ಬದಲಾವಣೆಗಳನ್ನು ಮಾಡಿಕೊಳ್ಳುವುದು ಅಗತ್ಯ. ನಾವು ಯಕ್ಷಗಾನದಿಂದ ಏನು ಪಡೆದುಕೊಂಡಿದ್ದೇವೆ ಎನ್ನುವುದಕ್ಕಿಂತಲೂ ಏನು ಕೊಟ್ಟಿದ್ದೇವೆ ಎಂಬುದು ಮುಖ್ಯ. ಹೆಚ್ಚಿನ ಕಲಾವಿದರಿಗೆ ಅದು ಸಾಧ್ಯ ಆಗುವುದಿಲ್ಲ. ಮೊದಲು ಎಷ್ಟೋ ಜನ ಕಲಾವಿದರು ಇದ್ದರು ಅವರ ಹೆಸರು ನಮಗೆ ನೆನಪಿಲ್ಲ. ಯಕ್ಷಗಾನಕ್ಕಾಗಿ ಕೊಟ್ಟವರ ಹೆಸರು ನೆನಪಿನಲ್ಲುಳಿಯುತ್ತದೆ.

## ಕಂಬನಿ


ಯಕ್ಷಗಾನದ ಧ್ರುವತಾರೆ ಎಂದೆನಿಸಿಕೊಂಡ ಖ್ಯಾತ ಯಕ್ಷಗಾನ ಹಾಗೂ ತಾಳ ಮದ್ದಲೆ ಕಲಾವಿದ ***ಕುಂಬ್ಳೆ ಸುಂದರ್ ರಾವ್*** (೮೮) ಬುಧವಾರ ಮುಂಜಾನೆ ವಿಧಿವಶರಾಗಿದ್ದಾರೆ. ಅದ್ಭುತ ವಾಕ್ ಚಾತುರ್ಯದಿಂದ ಪ್ರಸಿದ್ಧವಾಗಿದ್ದ ಕುಂಬ್ಳೆ ಸುಂದರ್ ರಾವ್ ಅವರು, ಪ್ರಾಸಬದ್ಧ ಸಂಭಾಷಣೆಯಿಂದಲೆ ಹೆಸರುವಾಸಿಯಾಗಿದ್ದರು. ಯಕ್ಷಗಾನದ ತೆಂಕುತಿಟ್ಟು ಕಲಾವಿದರಾಗಿದ್ದ ಅವರು, ಧರ್ಮಸ್ಥಳ ಮತ್ತು ಇರಾ ಯಕ್ಷಗಾನ ಮೇಳದಲ್ಲಿ ಕಲಾವಿದರಾಗಿ ಸೇವೆ ಮಾಡಿದ್ದರು. ಕರ್ನಾಟಕ ರಾಜ್ಯ ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದ ಕುಂಬ್ಳೆ ಸುಂದರ್ ರಾವ್ ಅವರು, ೧೯೯೪ರಿಂದ ೧೯೯೯ರವರೆಗೆ ಸುರತ್ಕಲ್ ಕ್ಷೇತ್ರದಿಂದ ಹತ್ತನೇ ಕರ್ನಾಟಕ ವಿಧಾನ ಸಭೆಯ ಸದಸ್ಯರಾಗಿದ್ದರು. ಶಾಸಕರಾಗಿಯೂ ತಮ್ಮ ಕ್ಷೇತ್ರದಲ್ಲಿ ಉತ್ತಮ ಕೆಲಸಗಳನ್ನು ಮಾಡಿದ್ದರು. ಮೇರು ಕಲಾವಿದನ ನಿಧನಕ್ಕೆ ನಾದ ನೂಪುರ ತಂಡದಿಂದ ಭಾವಪೂರ್ಣ ಶ್ರದ್ಧಾಂಜಲಿ



## ನಮ್ಮ ಲೈಬ್ರರಿ – ಜೈಮಿನಿ ಭಾರತ ಆಧಾರಿತ ಯಕ್ಷಗಾನ ಪ್ರಸಂಗಗಳು

ಹಿಂದಿನ ಎಲ್ಲ ಯಕ್ಷಗಾನ ಪ್ರಸಂಗಗಳು ನಮ್ಮ ಪರಂಪರೆಯ ಪುರಾಣ ಗ್ರಂಥಗಳ ಆಧಾರದ ಮೇಲೆ ರಚಿಸಲ್ಪಟ್ಟಿವೆ. ನಮ್ಮ ನಾಡಿನಲ್ಲಿ ರಾಮಾಯಣ ಮಹಾಭಾರತದ ಕಥೆಗಳು ಯಕ್ಷಗಾನ ಪ್ರಸಂಗಗಳ ಪ್ರದರ್ಶನ, ತಾಳಮದ್ದಳೆ ಕೂಟಗಳ ಮೂಲಕ ಜನಮನ ಮುಟ್ಟಿವೆ. ಯಕ್ಷಗಾನದ ಕವಿಗಳು ರಚಿಸಿದ ಹಲವು ಜನಪ್ರಿಯ ಪ್ರಸಂಗಗಳಿಗೆ ಜೈಮಿನಿ ಭಾರತ ಆಧಾರ ಗ್ರಂಥವಾಗಿದೆ. ಒಂದು ಮಾಹಿತಿ ಪ್ರಕಾರ ಐವತ್ತೊಂಬತ್ತು ಯಕ್ಷಗಾನ ಪ್ರಸಂಗಗಳಿಗೆ ಜೈಮಿನಿ ಭಾರತ ಆಕರ ಗ್ರಂಥ.

ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಪರಿಗಣಿಸಲ್ಪಟ್ಟ ಅತ್ಯಂತ ಜನಪ್ರಿಯ ಕಾವ್ಯಗಳಲ್ಲಿ ಜೈಮಿನಿ ಭಾರತವೂ ಒಂದು. ಮೂಲ ಸಂಸ್ಕೃತ ಜೈಮಿನಿ ಭಾರತ ಮಹರ್ಷಿ ಜೈಮುನಿಯು ಜನಮೇಯನಿಗೆ ಹೇಳಿದ ಕಥೆ. ಸಂಸ್ಕೃತ ಜೈಮಿನಿ ಭಾರತ 68 ಅಧ್ಯಾಯ 5194 ಶ್ಲೋಕ್ಷಗಳಿಂದ ರಚಿತವಾಗಿದೆ. ಸಂಸ್ಕತ ಜೈಮಿನಿ ಭಾರತದ ಕಾಲ ಕ್ರಿ.ಪೂ 100 ಆಗಿರಬಹುದೆಂದು ವಿದ್ವಾಂಸರು ತರ್ಕಿಸಿದ್ದಾರೆ. 1568ರಲ್ಲಿ ಬರೆದ ಇದರ ಪ್ರಥಮ ಹಸ್ತಪತ್ರಿ ಸಿಕ್ಕಿದೆ. ಕನ್ನಡದಲ್ಲಿ ಜೈಮಿನಿ ಭಾರತವನ್ನು ದೇವನೂರಿನ ಲಕ್ಷ್ಮೀಶ ಕವಿಯು ವಾರ್ಧಕ ಷಟ್ಪದಿ ಶೈಲಿಯಲ್ಲಿ ಹದಿನಾರನೆಯ ಶತಮಾನದ ಕಾಲಾವಧಿಯಲ್ಲಿ, 1907 ಪದ್ಯಗಳನ್ನೊಳಗೊಂಡ ೩೪ ಸಂಧಿಯೊಡನೆ ರಚಿಸಿದ್ದಾನೆ. ಆಂದ್ರದಲ್ಲಿ ತೆಲಗು ಭಾಷೆಯಲ್ಲಿ ಪಿಲ್ಲಲ ಮರಿಪಿನ ವೀರಭದ್ರ ಕವಿಯು 1871ರಲ್ಲಿ ಮರಾಠಿಯಲ್ಲಿ ಶ್ರೀಧರ ಕವಿಯು 1800ರಲ್ಲಿ ಜೈಮಿನಿ ಭಾರತ ಕೃತಿಯನ್ನು ರಚಿಸಿರುವ ಇತಿಹಾಸ ತಿಳಿದು ಬರುತ್ತದೆ. ಮನೋಹರವಾದ ಶೈಲಿ, ಆಕರ್ಷಕವಾದ ಕಥಾವಸ್ತು, ಪ್ರತಿಭಾಮಯವಾದ ವರ್ಣನೆ, ಉತ್ತಮೋತ್ತಮ ಪಾತ್ರ ಪೋಷಣೆ, ಹೃದಯಂಗಮ ರಸಭಾವ ನಿರೂಪಣೆ, ಕಿವಿಗಿಂಪಾದ ಶಬ್ದಾಲಂಕಾರ, ಅರ್ಥಲಂಕಾರ, ಚಿತ್ತ ಪರಿಪಾಕವನ್ನುಂಟುಮಾಡುವ ನೀತಿಬೋಧೆ ಇತ್ಯಾದಿ ವಿಶಿಷ್ಟತೆಯನ್ನು ಹೊಂದಿದ ಈ ಮಹಾ ಕಾವ್ಯ ರಚಿಸಿದ ಲಕ್ಷ್ಮೀಶ ಕರ್ನಾಟಕ ಕವಿಚೂತವನಚೈತ್ರ ಎನ್ನುವ ಬಿರುದಿಗೆ ಪಾತ್ರನಾಗಿದ್ದ.



ಜೈಮಿನಿ ಭಾರತದ ಎಲ್ಲ 34 ಸಂಧಿಯನ್ನು ಆಧರಿಸಿ ಯಕ್ಷಗಾನ ಕವಿಗಳು ಪ್ರಸಂಗಗಳನ್ನು ರಚಿಸಿರುವುದು ಒಂದು ಅಪೂರ್ವ ಸಂಗತಿ. ಜೈಮಿನಿ ಭಾರತದಲ್ಲಿ ವ್ಯಾಸ ಮಹರ್ಷಿಯ ಸಲಹೆಯಂತೆ ಪಾಂಡವರು ಅಶ್ವಮೇಧ ಯಾಗವನ್ನುಮಾಡಲು ನಿರ್ಧರಿಸಿ, ಶ್ರೀ ಕೃಷ್ಣನ ಅನುಮತಿಯನ್ನು ಪಡೆಯುವುದು, ಭೀಮಸೇನನು ವೃಷಕೇತು ಒಡಗೂಡಿ ಭದ್ರಾವತಿಗೆ ಹೋಗಿ ಯೌವನಾಶ್ವನನ್ನು ಸೋಲಿಸಿ ಯಾಗದ ಕುದುರೆಯನ್ನು ತರುವ ಕಥಾನಕ ಮೊದಲ ಐದು ಸಂಧಿಯಲ್ಲಿ ವರ್ಣಿಸಲ್ಪಟ್ಟಿದೆ. ಇದನ್ನು ಆಧರಿಸಿ ಯಕ್ಷಗಾನ ಕವಿಗಳು ವಾಜಿಗ್ರಹಣ ಅಥವಾ ಯೌವ್ವನಾಶ್ವ ಕಾಳಗ ಎನ್ನುವ ಪ್ರಸಂಗ ರಚಿಸಿದ್ದಾರೆ.

ಶಿರೂರು ಫಣಿಯಪ್ಪಯ್ಯ, ಜಾನಕೈ ತಿಮ್ಮಪ್ಪ ಹೆಗಡೆ, ಬಡೆಕಿಲ ವೆಂಕಟರಮಣ ಭಟ್ ಮೊದಲಾದ ಪ್ರಸಂಗಕರ್ತರು ಈ ಪ್ರಸಂಗ ರಚಿಸಿದ್ದಾರೆ. ಶಿರೂರು ಫಣಿಯಪ್ಪಯ್ಯನವರು 940ರಲ್ಲಿ ರಚಿಸಿದ ಈ ಪ್ರಸಂಗ ಪುಸ್ತಕ ೨೦೨೧ರಲ್ಲಿ ಡಾ ಕಬ್ಬಿನಾಲೆ ವಸಂತ ಭಾರದ್ವಾಜರವರ ಸಂಪಾದಕತ್ವದಲ್ಲಿ, ಫಣಿಗಿರಿ ಪ್ರತಿಷ್ಠಾನ ಶಿರೂರು ಇವರು ಪ್ರಕಟಿಸಿದ್ದಾರೆ. ಜಾನಕೈ ತಿಮ್ಮಪ್ಪ ಹೆಗಡೆಯವರು ರಚಿಸಿದ ಯೌವವನಾಶ್ವ ಅನುಸಾಲ್ವ ಕಾಳಗ ಯಕ್ಷಗಾನ ಪ್ರಸಂಗವನ್ನು ಉ.ಕ ಕಲಾಮಂಡಳಿ ಶಿರಸಿಯವರು 1957ರಲ್ಲಿ ಪ್ರಕಟಿಸಿದ್ದಾರೆ. ಇದೆ ಕೃತಿಯನ್ನು ಕನ್ನಡ ಮತ್ತು ಸಂಸ್ಕತಿ ಇಲಾಖೆಯವರು ಕೂಡ ಪ್ರಕಟಿಸಿದ್ದಾರೆ. ಜಾನಕೈ ತಿಮ್ಮಪ್ಪ ಹೆಗಡೆ ಸಮಗ್ರ ಕೃತಿ ಸಂಪುಟದಲ್ಲಿ ಕೂಡ ಈ ಪ್ರಸಂಗ ಸೇರಿದೆ. ಬಡೆಕ್ಕಿಲ ವೆಂಕಟರಮಣ ಭಟ್ಟರು ಬರೆದ ವಾಜಿಗ್ರಹಣ ಅಥವಾ ಯೌವ್ವನಾಶ್ವ ಕಾಳಗ ಪ್ರಸಂಗ ಪುಸ್ತಕ 1957ರಲ್ಲಿ ಕನ್ನಡ ಪ್ರಪಂಚ ಪ್ರಕಾಶನ ಕದ್ರಿ ಮಂಗಳೂರು ಇವರಿಂದ ಪ್ರಕಟಿಸಲ್ಪಟ್ಟಿದೆ. ಪಾಂಡವರ ಯಜ್ಞಾಶ್ವವನ್ನು ಅನುಸಾಲ್ವನು ಅಪಹರಿಸುವುದು, ಕೃಷ್ಣನು ವೃಷಕೇತು ಮೂಲಕ ಅನುಸಾಲ್ವನನ್ನು ಸೋಲಿಸಿ ಕುದುರೆಯನ್ನು ಬಿಡಿಸುವುದು, ನೀಲಧ್ವಜನನ್ನು ಅರ್ಜುನ ಸೋಲಿಸಿ ಯಾಗ ಕುದುರೆಯನ್ನು ಬಿಡಿಸುವುದು, ಜ್ವಾಲೆ ಗಂಗೆಯಿಂದ ಅರ್ಜುನನಿಗೆ ಶಾಪ ಕೊಡಿಸುವುದು ಮೊದಲಾದ ಕಥೆಯನ್ನು ಜೈಮಿನಿ ಭಾರತದ ಆರರಿಂದ ಒಂಭತ್ತನೆಯ ಸಂಧಿಯಲ್ಲಿ ವಿವರಿಸಲಾಗಿದೆ. ಈ ಕಥೆಯನ್ನು ಆಧರಿಸಿ ಅಜ್ಜನದ್ದೆ ಶಂಕರನಾರಾಯಣ ಎನ್ನುವ ಹಿರಿಯ ಯಕ್ಷಗಾನ ಕವಿ 473 ಪದ್ಯಗಳ ಸುಂದರ ಪ್ರಸಂಗ ರಚಿಸಿದ್ದು ಅದನ್ನು 1954 ರಲ್ಲಿ ಆರ್ ವಿಟ್ಟಪ್ಪ ಶೆಣೈ ಎಂಡ್ ಸನ್ಸ್ ಕಾರ್ಕಳ ಇವರು ಪ್ರಕಟಿಸಿದ್ದಾರೆ. ಈ ಪ್ರಸಂಗ ಕೃತಿ ೨೦೦೭ರಲ್ಲಿ ಯಕ್ಷಗಾನ ಮಾಲಿಕೆ–3 ರಲ್ಲಿ ಕೂಡ ಪ್ರಕಟಿತವಾಗಿದೆ. ಬೆಂಗಳೂರಿನ ಯಕ್ಷವಾಹಿನಿಯವರು ಪ್ರಸಂಗಕೋಶದ ಅಂತರ್ಜಾಲ ಆವೃತ್ತಿಯಲ್ಲೂ ಈ ಪುಸ್ತಕ 2018ರಲ್ಲಿ ಪ್ರಕಟಿಸಿದ್ದಾರೆ. ಪ್ರಸಿದ್ಧ ಭಾಗವತ ಹಾಗೂ ಪ್ರಸಂಗಕರ್ತ ಹೊಸ್ತೋಟ ಮಂಜುನಾಥ ಭಾಗವತರು ಯಕ್ಷಗಾನದಲ್ಲಿ ಜ್ವಾಲಾ ಪ್ರತಾಪ ಎನ್ನುವ ಪ್ರಸಂಗ ರಚಿಸಿದ್ದು ಅಭಿನವ ಪ್ರಕಾಶನ ಬೆಂಗಳೂರಿಂದ 2019ರಲ್ಲಿ ಪ್ರಕಟವಾಗಿದೆ. ಇದು ಕೂಡ ಜೈಮಿನಿ ಭಾರತ ಆಧಾರಿತ ಪ್ರಸಂಗ ಕೃತಿ. ನೀಲಧ್ವಜ ಕಾಳಗ ಎನ್ನುವ ಅಜ್ಞಾತ ಕವಿಯ ಪ್ರಸಂಗವು ಕಡಂದಲೆ ಬಿ ರಾಮರಾವ್ ಎನ್ನುವವರಿಂದ ಪರಿಷ್ಕರಿಸಲ್ಪಟ್ಟು ಉಡುಪಿಯ ಶ್ರೀಮನ್ಮಧ್ವಾ ಸಿದ್ಧಾಂತ ಗ್ರಂಥಾಲಯದವರಿಂದ 1932ರಲ್ಲಿ ಪ್ರಕಟಿಸಲ್ಪಟ್ಟಿದೆ. ಜೈಮಿನಿ ಭಾರತದ ಹತ್ತನೆಯ ಸಂಧಿಯಲ್ಲಿ ಬರುವ ಉದ್ದಾಲಕನ ಕಥೆಯನ್ನು ಆಧರಿಸಿ ಡಾ ಶೇಣಿ ಗೋಪಾಲಕೃಷ್ಣ ಭಟ್ಟರು ಉದ್ದಾಲಕ ಅಥವಾ ವಿಷಮ ದಾಂಪತ್ಯ ಎನ್ನುವ ಚಿಕ್ಕ ಪ್ರಸಂಗ ರಚಿಸಿದ್ದು ಯಕ್ಷಕೂಟ ಪುತ್ತೂರು ಇವರ ಶೇಣಿ ಕೃತಿ ಶೇಣಿ–1995 ಇದರಲ್ಲಿ ಪ್ರಕಟಿತವಾಗಿದೆ. ಬಹಳ ಪ್ರಚಲಿತದಲ್ಲಿರುವ ಹಂಸಧ್ವಜ ಸುಧನ್ವರ ಕಥೆಯನ್ನು ಒಳಗೊಂಡ ಸುಧನ್ವಕಾಳಗ ಯಕ್ಷಗಾನ ಪ್ರಸಂಗ ಕೃತಿಯನ್ನು ಮೂಲ್ಕಿ ರಾಮಕೃಷಯ್ಯ ಎನ್ನುವ ಕವಿ ಜೈಮಿನಿ ಭಾರತದ ಹನ್ನೊಂದರಿಂದ ಹದಿನಾಲ್ಕನೆಯ ಸಂಧಿಯ ಕಥೆಯನ್ನು ಆಧರಿಸಿ ರಚಿಸಿದ್ದಾರೆ. ಇದು ಉಡುಪಿಯ ಶ್ರೀ ಮನ್ಮಧ್ವಸಿದ್ಧಾಂತ ಗ್ರಂಥಾಲಯದಿಂದ 1929ರಲ್ಲಿ ಮತ್ತು 1972ರಲ್ಲಿ, ಯಕ್ಷವಾಹಿನಿಯ ಅಂತರ್ಜಾಲ ಪ್ರಕಾಶನದಲ್ಲಿ 2018ರಲ್ಲಿ ಮತ್ತು ಕನ್ನಡ ಸಂಸ್ಕತಿ ಇಲಾಖೆಯ ಯಕ್ಷಗಾನ ಸಂಪುಟದಲ್ಲಿ ಪ್ರಕಟಿತವಾಗಿದೆ. ನಾರಾಯಣ ಭಟ್ಟರಿಂದ ರಚಿತವಾದ ಪ್ರಮೀಳಾ ಕಲ್ಯಾಣ ಎನ್ನುವ ಯಕ್ಷಗಾನ ಪ್ರಸಂಗವು ಜೈಮಿನಿ ಭಾರತದ ಹದಿನೈದು ಮತ್ತು ಹದಿನಾರನೆಯ ಸಂಧಿಯ ಕಥಾಭಾಗವನ್ನು ಆಧರಿಸಿ ರಚಿಸಲ್ಪಟ್ಟಿದೆ. ಈ ಕೃತಿಯನ್ನು ಮುಂಬಯಿಯ ಪದವೀಧರ ಯಕ್ಷಗಾನ ಸಮಿತಿಯವರು 1996ರಲ್ಲಿ ಪ್ರಕಟಿಸಿದ್ದಾರೆ.

ರತ್ನಾಪುರದ ರಾಮ ಕವಿ ಬರೆದ ತಾಮ್ರಧ್ವಜನ ಕಾಳಗ 1952ರಲ್ಲಿ ಉಡುಪಿಯ ಶ್ರೀ ಮನ್ಮಧ್ವಸಿದ್ಧಾಂತ ಗ್ರಂಥಾಲಯದಿಂದ ಪ್ರಕಟಿತವಾಗಿದೆ. ಬೇಳೂರು ಜಾಣ ರಾಮಚಂದ್ರ ರಾವ್ ಎನ್ನುವ ಪ್ರಸಂಗಕರ್ತ ಬರೆದ ವೀರವರ್ಮ ಕಾಳಗ 1968ರಲ್ಲಿ ಪ್ರಕಟಿತವಾಗಿದೆ. ಹಲಸಿನಹಳ್ಳಿ ನರಸಿಂಹ ಶಾಸ್ತ್ರೀ ಮೊದಲಾದ ಹಲವು ಯಕ್ಷಗಾನ ಕವಿಗಳಿಂದ ರಚಿತವಾದ ಚಂದ್ರಹಾಸ ಚರಿತ್ರೆ ಜೈಮಿನಿ ಭಾರತದ ಇಪ್ಪತೆಂಟರಿಂದ ಮೂವತ್ತೊಂದನೆಯ ಸಂಧಿಯ ಕಥಾ ಭಾಗದ ಆಧಾರದಿಂದ ರಚಿಸಲ್ಪಟ್ಟಿದೆ. ಹಟ್ಟಿಯಂಗಡಿ ರಾಮಭಟ್ಟರ ಲವಕುಶ ಪ್ರಸಂಗ ಕೂಡ ಜೈಮಿನಿ ಭಾರತ ಆಧಾರಿತ ಕೃತಿಯಾಗಿದೆ. ಒಂದು ಮಾಹಿತಿ ಪ್ರಕಾರ ಐವತ್ತೊಂಬತ್ತು ಯಕ್ಷಗಾನ ಪ್ರಸಂಗಗಳಿಗೆ ಜೈಮಿನಿ ಭಾರತ ಆಕರ ಗ್ರಂಥ.

## ಚಿನ್ನದ ಅಳಿಲು ಪ್ರಸಂಗ ಬಿಡುಗಡೆ



ದಿನಾಂಕ 09-11-2022ನೇ ಬುಧವಾರದಂದು ಹಂಗಾರಕಟ್ಟೆ ಯಕ್ಷಗಾನ ಕಲಾಕೇಂದ್ರದ ಸದಾನಂದ ರಂಗ ಮಂಟಪ ಗುಂಡ್ಮಿಯಲ್ಲಿ ಸೋಶಿಯಲ್ ಇನ್ಫ್ರಾ ಸ್ಟಕ್ಚರ್ ಡೆವಲಪ್‌ಮೆಂಟ್ ಸೊಸೈಟಿ (ಸಿಂಡ್ಸ್) ಮಂಗಳೂರು, ನಾದ ನೂಪುರ ಯಕ್ಷೋತ್ಥಾನ ಟ್ರಸ್ಟ್ (ಎನ್ ವೈಟಿ)ವಂಡಾರು, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಶುಭಾಶಯ ಜೈನ್ ವಿರಚಿತ "ಚಿನ್ನದ ಅಳಿಲು" (ಸ್ವರ್ಣ ಕಲಂದಕ) ಎಂಬ ಯಕ್ಷಗಾನ ಪ್ರಸಂಗ ಬಿಡುಗಡೆ ಹಾಗು ಪ್ರಥಮ ಪ್ರಯೋಗ ನಡೆಯಿತು. ನೂತನ ಪ್ರಸಂಗವನ್ನು ಉಡುಪಿ ಜಿಲ್ಲೆಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಶ್ರೀಮತಿ ಪೂರ್ಣಿಮಾರವರು ಬಿಡುಗಡೆಗೊಳಿಸಿದರು. ಈ ಸಂದರ್ಭ ಮಾತನಾಡಿದ ಅವರು ಸಾಂಸ್ಕೃತಿಕವಾಗಿ ಶ್ರೀಮಂತವಾಗಿರುವ ಉಡುಪಿ ಜಿಲ್ಲೆಯಲ್ಲಿ ಹಲವಾರು ಕಲಾತಂಡಗಳಿವೆ. ಆದರೆ ಅನೇಕ ಸಲ ಅರ್ಹತೆ ಇಲ್ಲದವರು ಅನುದಾನದ ಲಾಭವನ್ನು ಪಡೆದುಕೊಳ್ಳುತ್ತಿದ್ದಾರೆ. ಅರ್ಹರಾದವರಿಗೆ ಇಲಾಖೆಯ ನೆರವು ದೊರಕುವಂತಾಗಬೇಕು. ಕಲೆಯಲ್ಲಿ ಇಂತಹಾ ಹೊಸ ಪ್ರಯೋಗಗಳು ನಡೆಸುವಂತಹಾ ಕಾರ್ಯಕ್ರಮಕ್ಕೆ ಇಲಾಖೆಯಿಂದ ಬೆಂಬಲವನ್ನು ನೀಡಲು ಕಟಿಬದ್ಧರಾಗಿದ್ದೇವೆ. ಎಂದು ಹೇಳಿದರು

ಕಥೆ, ತಾಳ, ಗಾಯನ ಹಾಗೂ ಅರ್ಥ ವಿವರಣೆಗೆ ಪೂರಕವಾಗುವಂತೆ ಪದ್ಯ ಸಾಹಿತ್ಯವನ್ನು ನೀಡುವಂತಹ ಸಾಹಿತ್ಯದ ವಿಶಿಷ್ಟ ಪ್ರಬೇಧವೇ ಯಕ್ಷಗಾನ ಸಾಹಿತ್ಯ. ಯಕ್ಷಗಾನ ಕಲಾವಿದರ ನುಡಿಯಲ್ಲಿರೋ ಭಾಷಾ ಶ್ರೀಮಂತಿಕೆ, ಸಾಹಿತ್ಯ ಶ್ರೀಮಂತಿಕೆ, ಬೇರಿನ್ನಾವ ಕಲೆಯಲ್ಲೂ ಕಾಣ ಸಿಗಲಾರದು ಎಂದು



ಧೈರ್ಯದಿಂದ ಹೇಳಬಲ್ಲೆ. ಆದರೂ ಕನ್ನಡ ಸಾಹಿತ್ಯ ಪರಿಷತ್ ನಲ್ಲಿ ಯಕ್ಷಗಾನ ಕಲೆಗೆ ಬೇಕಾದ ಮಾನ್ಯತೆ ದೊರಕಿಲ್ಲ ಎನ್ನುವುದು ಬೇಸರದ ಸಂಗತಿ. ಆದ್ದರಿಂದ ಯಕ್ಷಗಾನ ಪ್ರಸಂಗಕರ್ತರನ್ನು ಕಲಾವಿದರನ್ನು ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಗುರುತಿಸಬೇಕು ಎಂದು ನೀಲಾವರ ಸುರೇಂದ್ರ ಅಡಿಗರು ಕನ್ನಡ ಸಾಹಿತ್ಯ ಪರಿಷತ್ ನ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಸಮಾಲೋಚಿಸಿದ್ದೆ. ಅದಾದ ಮೇಲೆ ಪರಿಷತ್‌ನ ಹಲವಾರು ಕಾರ್ಯಕ್ರಮಗಳಲ್ಲಿ ಯಕ್ಷಗಾನದ ಒಂದು ಗೋಷ್ಠಿ ಗಾನ ವೈಭವ ನಡೆಸಿಕೊಂಡು ಬರುವ ಪರಿಪಾಠ ಪ್ರಾರಂಭಿಸಿದರು ಎಂದು ಮಣಿಪಾಲದ ಎಂ ಐಟಿ ಕಾಲೇಜಿನ ಪ್ರೊಫೆಸರ್ ಆಗಿರುವ ಎಸ್ ವಿ ಉದಯ್ ಕುಮಾರ್ ಶೆಟ್ಟಿಯವರು ಹೇಳಿದರು.

ಹಿರಿಯ ಕಲಾವಿದರಾದ ಎಂ ಕೆ ರಮೇಶ್ ಆಚಾರ್ ರವರು ಮಾತನಾಡಿ ಶುಭಾಶಯ ಜೈನ್ ರವರು ಬರೆದಿರುವ ಚಿನ್ನದ ಅಳಿಲು ಎಂಬ ಹೊಸ ಪ್ರಸಂಗದಲ್ಲಿ ಇರುವ ಆಶಯವೆಂದರೆ, ಪ್ರಾಮಾಣಿಕತೆಗೆ ಬೆಲೆ ಇದೆ, ಬಲ ಇದೆ ಎಂದು ತೋರಿಸುವುದು ಈ ಪ್ರಸಂಗದಲ್ಲಿ ಅಳಿಲಿನ ಪರಿಶುದ್ಧ ಭಕ್ತಿ, ಸೇತುವೆ ರಚನೆಗೆ ಮರಳು ಸುರಿದು ಸೇವೆ ಮಾಡುವ ಅಳಿವ ಸೇವೆ ಶ್ರೇಷ್ಠ ಎನ್ನುವ ಪ್ರಾಮಾಣಿಕ ಸಂದೇಶವಿದ್ದು ಸ್ವೀಕಾರಾರ್ಹವಾದ ಪ್ರಸಂಗ ಎಂದು ಹೇಳಿ ಶುಭ ಹಾರೈಸಿದರು.

ಈ ಸಂದರ್ಭ ಭಾಗವತರಾದ ಚಂದ್ರಕಾಂತ್ ಮೂಡುಬೆಳ್ಳೆ ಇವರನ್ನು ಕುಶಲ ರಂಗ ನಿರ್ದೇಶಕ ಎಂಬ ಅಭಿದಾನದೊಂದಿಗೆ ನಾದ ನೂಪುರ ಯಕ್ಷೋತ್ಥಾನ ಟ್ರಸ್ಟ್ ವತಿಯಿಂದ ಗೌರವಿಸಲಾಯಿತು. ಶ್ರೀ ಹರೀಶ್ ಅಮ್ಮೆ, ಸಿಂಡ್ಸ್ ಮಂಗಳೂರು, ಇವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಯಕ್ಷಗಾನ ಪ್ರಾಚಾರ್ಯರಾದ ಶ್ರೀ ಕೆಪಿ ಹೆಗಡೆ ಅಭಿನಂದನಾ ಭಾಷಣ ಮಾಡಿದರು. ಹಂಗಾರಕಟ್ಟೆ ಯಕ್ಷಗಾನ ಕಲಾ ಕೇಂದ್ರದ ನಿರ್ದೇಶಕರಾದ ಶ್ರೀ ರಾಜಶೇಖರ್ ಹೆಬ್ಬಾರ್ ಉಪಸ್ಥಿತರಿದ್ದರು. ಎನ್ ವೈಟಿಯ ಮುಖ್ಯಸ್ಥರಾದ ಶ್ರೀ ಗೋವಿಂದ ವಂಡಾರು ಅತಿಥಿಗಳನ್ನು ಸ್ವಾಗತಿಸಿದರು. ನಾದ ನೂಪುರ ಡಿಜಿಟಲ್ ಯಕ್ಷ ಪತ್ರಿಕೆಯ ಪ್ರಧಾನ ಸಂಪಾದಕರಾದ ಶುಭಾಶಯ ಜೈನ್ ವಂದನಾರ್ಪಣೆ ಮಾಡಿದರು.

## ಶಿರೂರು ಫಣಿಯಪ್ಪಯ್ಯ ಯಕ್ಷಗಾನ ಪ್ರಸಂಗ ಸಂಪುಟ ಬಿಡುಗಡೆ ಮತ್ತು ಫಣಿಗಿರಿ ಪ್ರಶಸ್ತಿ ಪ್ರದಾನ ಸಮಾರಂಭ

ಶಿರೂರು ಫಣಿಯಪ್ಪಯ್ಯ ಸಂಸ್ಮರಣಾ ಕಾರ್ಯಕ್ರಮ **20 -11 -2022** ರಂದು ಉಪ್ಪಿನಕುದ್ರು ಗೊಂಬೆಯಾಟ ಅಕಾಡೆಮಿಯ **77**ನೆಯ ಕಾರ್ಯಕ್ರಮವಾಗಿ ಅಕಾಡೆಮಿಯ ಸಭಾಂಗಣದಲ್ಲಿ ನಡೆಯಿತು. ಈಶಾನ್ಯ ರಾಜ್ಯಗಳ ವಿಶ್ರಾಂತ ರಾಜ್ಯಪಾಲ ಶ್ರೀ ಪದ್ಮನಾಭ ಆಚಾರ್ಯ ದಂಪತಿಗಳ ಉಪಸ್ಥಿತಿಯಲ್ಲಿ ಯಕ್ಷಗಾನ ಕವಿ ಕಂದಾವರ ರಘುರಾಮ ಶೆಟ್ಟಿಯವರಿಗೆ ಫಣಿಗಿರಿ ಪ್ರಶಸ್ತಿ–೨೦೨೨ ಪ್ರದಾನ, ಶಿರೂರು ಫಣಿಯಪ್ಪಯ್ಯ ವಿರಚಿತ ಐದು ಯಕ್ಷಗಾನ ಪ್ರಸಂಗಗಳ ಸಂಪುಟ ಬಿಡುಗಡೆ, ಶಿರೂರು ಫಣಿಗಿರಿ ಸಂಗ್ರಹದ ೩೦೦೦ ಪುಟಗಳ ತಾಳೆಗರಿ ಗ್ರಂಥ ಹಾಗೂ ಇತರ ಹಳೆಯ ಯಕ್ಷಗಾನ ಹಸ್ತಪ್ರತಿ, ಮುದ್ರಿತ ಪುಸ್ತಕಗಳ ಪ್ರದರ್ಶನ, ಭಾಗವತ ಹೆರಾಂಜಾಲು ಗೋಪಾಲ ಗಾಣಿಗ ಮತ್ತು ಸಂಗಡಿಗರಿಂದ ಯಕ್ಷ ಗಾನ ವೈಭವ, ಭಾಸ್ಕರ ಕೊಗ್ಗ ಕಾಮತ ತಂಡದವರಿಂದ ಗೊಂಬೆಯಾಟ ಪ್ರಾತ್ಯಕ್ಷಿಕೆ ಪ್ರದರ್ಶನ ಕಾರ್ಯಕ್ರಮಗಳೊಂದಿಗೆ ನಡೆಯಿತು.

ಫಣಿಗಿರಿ ಪ್ರತಿಷ್ಠಾನ ಶಿರೂರು ಪ್ರಕಟಿಸಿರುವ ಶಿರೂರು ಪಣಿಯಪ್ಪಯ್ಯ ವಿರಚಿತ ಯಕ್ಷಗಾನ ಪ್ರಸಂಗ ಸಂಪುಟ –೧, ಮದಲಸಾ ಪರಿಣಯ, ನಹುಷೋದ್ಭವ, ಅಬ್ಬಾಡಿ ಕ್ಷೇತ್ರ ಮಹಾತ್ಮೆ, ಭೂಮಿಕಾ ಪರಿಣಯ ಮತ್ತು ಶ್ವೇತ ಚಂದ್ರಿಕೆ ಎನ್ನುವ ಐದು ಪ್ರಸಂಗಗಳನ್ನು ಒಳಗೊಂಡಿದೆ. ಹಿರಿಯ ಯಕ್ಷಗಾನ ವಿದ್ವಾನ್ಸ ಡಾ ಕಬ್ಬಿನಾಲೆ ವಸಂತ ಭಾರದ್ವಾಜ ಈ ಪುಸ್ತಕದ ಸಂಪಾದಕರು.